ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ – ೨೨**

**ಒಟ್ಟು ಪ್ರಶ್ನೆಗಳು – ೬೨**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಮಂಗಳವಾರ, ದಿನಾಂಕ : ೨೨ನೇ ಜುಲೈ, ೨೦೧೪**

---

## ಸಮೂಹ – II

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

03396-1

## ಉದ್ಘಾಟನೆಯಾದ ಮರುದಿನವೇ ಸುಟ್ಟು ಹೋದ ೩೩ ಕೆ.ವಿ. ಉಪಕೇಂದ್ರ ಕತ್ತಲೆಯಲ್ಲಿ ಮುಳುಗಿರುವ ಗ್ರಾಮಗಳು

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೩೬೯ (೧೭೮೦) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರವಾರ ಜಿಲ್ಲೆ ಅಂಕೋಲಾ ತಾಲ್ಲೂಕಿನ ಹೊನ್ನಳ್ಳಿಯಲ್ಲಿ ೫ ವರ್ಷಗಳ ಸತತ ಪ್ರಯತ್ನದಿಂದ ಸರ್ವಕಾಲಿಕ ವಿದ್ಯುತ್ ಸೌಲಭ್ಯಕ್ಕಾಗಿ ೩೩ ಕೆ.ವಿ.ಯ ಉಪಕೇಂದ್ರ ಆರಂಭಿಸಲಾಗಿತ್ತು, ದಿನಾಂಕ : ಮಾರ್ಚ್ ೧, ೨೦೧೪ ರಂದು ಉದ್ಘಾಟನೆ ಆದ ಮಾರನೇ ದಿನವೇ ಉಪಕೇಂದ್ರ ಸುಟ್ಟು, ಈಗ ನಾಲ್ಕು ತಿಂಗಳಿಂದ ಕಾರ್ಯವಿಲ್ಲದೇ ಸ್ಥಗಿತಗೊಂಡಿದೆ. ಇದರಿಂದ ಗ್ರಾಮದ ಸುತ್ತಮುತ್ತಲಿನ ಭಾಗದ ಜನರು ಇಲ್ಲಿಯವರೆಗೆ ವಿದ್ಯುತ್ ಇಲ್ಲದೇ ಕತ್ತಲಿನಲ್ಲಿಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ (ವಿವರ ನೀಡುವುದು) ;

(ಆ) ಈ ಮಾಸ್ತಿಕಟ್ಟೆ ಉಪಕೇಂದ್ರದಲ್ಲಿ ಕೋಟ್ಯಾಂತರ ರೂಪಾಯಿಯ ಅವ್ಯವಹಾರವಾಗಿರುವುದು ಇಲ್ಲಿ ನಡೆಸಿದ ಕಾಮಗಾರಿಯಿಂದ ಬಹಿರಂಗವಾಗಿದೆ, ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಯಾರು ; ಇವರ ಮೇಲೆ ಯಾವ ತನಿಖೆ ಆಗಿದೆ ; ಒಂದು ಹೊಸ ಗ್ರೀಡ್‌ಗೆ ಹಳೆಯದಾದ ಜೀರ್ಣಾವಸ್ಥೆಯಲ್ಲಿರುವ ವಿದ್ಯುತ್ ಉಪಕರಣ ಅಳವಡಿಸಿರುವುದು ನಿಜವೇ ; ಹಾಗಿದ್ದಲ್ಲಿ ಆ ಅವಧಿಯಲ್ಲಿದ್ದ ಅಧಿಕಾರಿಗಳು ಯಾರು, ಅವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು) ?

## ಅನುಕಂಪದ ಆಧಾರದ ಮೇಲೆ ನೇಮಕಾತಿ

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೭೦ (೧೭೧೮) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾರವಾರ ಜಿಲ್ಲೆಯ ಹುಬ್ಬಳ್ಳಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಬೇಕಾದ ಎಷ್ಟು ಪ್ರಕರಣಗಳು ಬಾಕಿ ಇವೆ ; ಬಾಕಿ ಇದ್ದರೇ, ಯಾವ ಕಾರಣಕ್ಕಾಗಿ ಬಾಕಿ ಇರಿಸಿಕೊಳ್ಳಲಾಗಿದೆ ; ಈ ಕುರಿತು ಅರ್ಜಿದಾರರು ಅರ್ಜಿ ಸಲ್ಲಿಸಿದ ದಿನಾಂಕ, ಹೆಸರು ಸಮೇತ ವಿವರ ನೀಡುವುದು ;

(ಆ) ಸದರಿ ಬಾಕಿ ಇರುವ ಅರ್ಜಿಗಳನ್ನು ಇಟ್ಟುಕೊಳ್ಳಲು ಅಲ್ಲಿನ ಸಿಬ್ಬಂದಿಗಳ ನಿರ್ಲಕ್ಷವೇ ಕಾರಣವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದಕ್ಕೆ ಸಂಬಂಧಿಸಿದ ಸಿಬ್ಬಂದಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ; ಈಗಾಗಲೇ ಬಾಕಿ ಇರುವ ಅರ್ಜಿಗಳನ್ನು ಎಷ್ಟು ದಿನದಲ್ಲಿ ಇತ್ಯರ್ಥ ಮಾಡಲಾಗುವುದು (ವಿವರ ನೀಡುವುದು) ?

# ಹೆಸ್ಕಾಂನಲ್ಲಿ ಉಪಕರಣಗಳ ಖರೀದಿ

**ಶ್ರೀ ಘೊಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೭೧ (೧೭೧೯) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾರವಾರ ಜಿಲ್ಲೆಯ ಹುಬ್ಬಳ್ಳಿ ವಿದ್ಯುತ್ ಸರಬರಾಜು ನಿಗಮದ ಅಧೀನದಲ್ಲಿ ಬರುವ ಪ್ರತಿಯೊಂದು ತಾಲ್ಲೂಕಿನ ಕಛೇರಿಗಳಲ್ಲಿ ಕಳೆದ ೩ ವರ್ಷಗಳಲ್ಲಿ ಖರೀದಿಸಿದ ಉಪಕರಣಗಳ ಕುರಿತು ವಿವರ ನೀಡುವುದು (ಪ್ರತಿಯೊಂದು ಕಛೇರಿ ಪೂರೈಸಿಕೊಂಡ ವಿದ್ಯುತ್ ಕಂಬ, ತಂತಿ ವಿವರ ಬೇರೆ ಬೇರೆಯಾಗಿ ನೀಡುವುದು) ;

(ಆ) ಸದರಿ ಕಂಪನಿ ಪೂರೈಸಿಕೊಂಡ ವಿದ್ಯುತ್ ಕಂಬ, ತಂತಿ ಹಾಗೂ ಇತರೇ ಉಪಕರಣಗಳು ಸಾರ್ವಜನಿಕರಿಗೆ ಸರಿಯಾಗಿ ಲಭ್ಯವಾಗದೇ ದುರುಪಯೋಗವಾಗಿರುವ ಕುರಿತು ಅನುಮಾನ ಬಂದಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; ದುರಪಯೋಗವಾಗಿದ್ದಲ್ಲಿ, ಯಾವ ಯಾವ ಅಧಿಕಾರಿಗಳ ಮೇಲೆ ಇಲ್ಲಿಯವರೆಗೆ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು) ;

(ಇ) ಜಿಲ್ಲೆಯ ದಾಂಡೇಲಿ/ಶಿರಸಿ/ಕಾರವಾರ ತಾಲ್ಲೂಕಿನಲ್ಲಿ ವಿದ್ಯುತ್ ಕಂಬದ ದಾಸ್ತಾನಿಗೆ ಸಂಬಂಧಿಸಿದ ಸಿಬ್ಬಂದಿಯೇ ಅದನ್ನು ಸಾರ್ವಜನಿಕವಾಗಿ ಮಾರುತ್ತಿರುವ ವಿಷಯ ಸರ್ಕಾರಕ್ಕೆ ತಿಳಿದಿರುತ್ತದೆಯೇ ; ಇದ್ದಲ್ಲಿ ಅವ್ಯವಹಾರ ಮಾಡಿರುವ ಸಿಬ್ಬಂದಿಗಳ ವಿವರ ನೀಡುವುದು ; ಇವರ ಮೇಲೆ ಇಲಾಖೆ ಏನು ಕ್ರಮ ಕೈಗೊಂಡಿರುತ್ತದೆ ?

# ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಸ್ವಚ್ಛತೆಗೆ ಪರ್ಯಾಯ ವ್ಯವಸ್ಥೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೭೨ (೧೭೪೯) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರದ ಸುತ್ತೋಲೆ ಸಂ. ನಅಇ/೧೨೪/TMC/೨೦೧೨ರಲ್ಲಿ ಪೌರ ಕಾರ್ಮಿಕರನ್ನು ಯಾವುದೇ ಏಜೆನ್ಸಿಯ ಮೂಲಕ ನೇಮಿಸಿಕೊಳ್ಳಬಾರದೆಂದು ಆದೇಶ ಹೊರಡಿಸಿರುವುದರಿಂದ ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳಲ್ಲಿನ ಸ್ವಚ್ಛತೆಗೆ ಸರ್ಕಾರ ಯಾವ ಪರ್ಯಾಯ ವ್ಯವಸ್ಥೆ ಕೈಗೊಂಡಿದೆ (ಪೂರ್ಣ ವಿವರ ನೀಡುವುದು) ;

(ಆ) ಪೌರ ಕಾರ್ಮಿಕ ಸೇವೆಯನ್ನು ಹೊರ ಸಂಪನ್ಮೂಲ ಆಧಾರದ ಮೇಲೆ ಪಡೆದುಕೊಳ್ಳುವ ಸಮಯದಲ್ಲಿ ಪೌರ ಕಾರ್ಮಿಕರಿಗೆ ನೀಡಬೇಕಿರುವ ಮಾಸಿಕ ವೇತನ ಯಾವ ಇಲಾಖೆ ನಿಗದಿಪಡಿಸಿರುವ ವೇತನದ ಆಧಾರದ ಮೇಲೆ ಪರಿಗಣಿಸಿ ನೀಡಬೇಕು ;

(ಇ) ಪೌರ ಕಾರ್ಮಿಕರಿಗೆ ನೀಡುತ್ತಿರುವ ವೇತನ ಕಡಿಮೆಯಾದ ಹಿನ್ನೆಲೆಯಲ್ಲಿ ಕಾರ್ಮಿಕ ಕೊರತೆಯಾಗುತ್ತಿದ್ದು ಇದರ ಪರಿಹಾರಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು (ಪೂರ್ಣ ವಿವರ ನೀಡುವುದು) ?

## ನಿಬಂಧಕರ ಕಛೇರಿಯಲ್ಲಿ ಬಾಕಿ ಇರುವ ಪ್ರಕರಣಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೩೭೩ (೧೭೫೦) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ತಾಲ್ಲೂಕಿನ ಸಹಾಯಕ ನಿಬಂಧಕರ ಕಛೇರಿಯಲ್ಲಿ ಸಹಾಯಕ ನಿಬಂಧಕರು ನೇಮಕಗೊಂಡಿದ್ದಾರೆಯೇ ;

(ಆ) ಹಾಗೆಯೇ ಎಲ್ಲಾ ಸಹಾಯಕ ನಿಬಂಧಕರ ಕಛೇರಿಯಲ್ಲಿ ತನಿಖೆಗೆ ಬಾಕಿ ಇರುವ ಪ್ರಕರಣಗಳೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಪೂರ್ಣ ಮಾಹಿತಿ ನೀಡುವುದು) ;

(ಇ) ಹಲವು ಪ್ರಕರಣಗಳು ಬಾಕಿ ಇರುವುದನ್ನು ಸರ್ಕಾರ ಗಮನಿಸಿದೆಯೇ ;

(ಈ) ಮೂರು ವರ್ಷಗಳ ಹಿಂದಿನಿಂದಲೂ ಬಾಕಿ ಇರುವ ಪ್ರಕರಣಗಳನ್ನು ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮವೇನು (ಪೂರ್ಣ ವಿವರ ನೀಡುವುದು) ?

## ರಾಜ್ಯ ರಸ್ತೆ ಮತ್ತು ಜಿಲ್ಲಾ ರಸ್ತೆಗಳ ಅಭಿವೃದ್ಧಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೩೭೪ (೧೭೫೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯ ಮೂಲಕ ಖರ್ಚಾದ ಅನುದಾನವೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು, ಕಾಮಗಾರಿವಾರು ವಿವರ ನೀಡುವುದು) ;

(ಆ) ರಾಜ್ಯದಲ್ಲಿ ತುಂಬಾ ಹಾಳಾದ ರಾಜ್ಯ ರಸ್ತೆ ಮತ್ತು ಜಿಲ್ಲಾ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ವಿಚಾರ ಸರ್ಕಾರದ ಮುಂದಿದೆಯೇ ;

(ಇ) ಹಾಗಿದ್ದಲ್ಲಿ, ಜಿಲ್ಲಾ ಮತ್ತು ರಾಜ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ (ಪೂರ್ಣ ವಿವರ ನೀಡುವುದು) ?

## ಕೃಷಿ ಮತ್ತು ಜಲಾನಯನ ಇಲಾಖೆಯ ಒಗ್ಗೂಡುವಿಕೆಯಿಂದ ಅಭಿವೃದ್ಧಿ ಕುಂಠಿತ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೭೫ (೧೭೫೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೃಷಿ ಮತ್ತು ಜಲಾನಯನ ಇಲಾಖೆಯನ್ನು ಒಗ್ಗೂಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಈ ರೀತಿ ಒಗ್ಗೂಡಿಸಿದರೆ ಇಲಾಖಾ ಕಾಮಗಾರಿ ಕುಂಠಿತವಾಗುತ್ತದೆ ಎಂಬುದನ್ನು ಸರ್ಕಾರ ಗಮನಿಸಿಲ್ಲವೇ ;

(ಇ) ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ (ಪೂರ್ಣ ವಿವರ ನೀಡುವುದು) ;

(ಈ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

## ವಿದ್ಯುತ್ ಕಂಬ ಮತ್ತು ತಂತಿಗಳ ಬದಲಾವಣೆ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೩೭೬ (೧೭೨೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ರೈತರ ಪಂಪುಸೆಟ್‌ಗಳಿಗೆ ವಿದ್ಯುತ್ ವಿತರಿಸುವ ಉಪಕರಣಗಳಾದ ವಿದ್ಯುತ್ ಕಂಬಗಳು ಮತ್ತು ತಂತಿಗಳು ಬಹಳ ಹಳೆಯದಾಗಿ ನಿರುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಮೇಲಿಂದ ಮೇಲೆ ವಿದ್ಯುತ್ ವ್ಯತ್ಯಯ ಮತ್ತು ಅಪಘಾತಗಳು ಸಂಭವಿಸುತ್ತಿರುವುದನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

## ಏಕ ವಿದ್ಯುತ್ ಕಂಬಕ್ಕೆ ಟ್ರಾನ್ಸ್‌ಫಾರ್ಮರ್ ಅಳವಡಿಸುವುದರಿಂದ ಆಗುತ್ತಿರುವ ಹಾನಿ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೩೭೭ (೧೭೨೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚಿನ ದಿನಗಳಲ್ಲಿ ಏಕ (ಒಂದೇ) ವಿದ್ಯುತ್ ಕಂಬಕ್ಕೆ ಟ್ರಾನ್ಸ್‌ಫಾರ್ಮರ್ ಅಳವಡಿಸುವುದರಿಂದ ಮಳೆ–ಗಾಳಿಗಳಿಂದ

ಕಂಬಕ್ಕೆ ಮತ್ತು ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗುತ್ತಿರುವುದು ಮತ್ತು ವಿದ್ಯುತ್ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರ ಗಮನಿಸಿದೆಯೇ ;

(ಆ) ಗಮನಿಸಿದ್ದಲ್ಲಿ, ಮೊದಲಿನಂತೆ ಜೋಡಿ ಕಂಬಗಳಿಗೆ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾರ್ಯ ಜಾರಿ ಮಾಡಲಾಗುವುದೇ ?

## ವಿದ್ಯುತ್ ಕಳವು ಪ್ರಕರಣಗಳನ್ನು ತಡೆಯುವುದು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೭೮ (೧೭೭೦) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ವ್ಯಾಪ್ತಿಯಲ್ಲಿ ಕಳೆದ ೩ ವರ್ಷಗಳಿಂದ ದಾಖಲಾಗಿರುವ ವಿದ್ಯುತ್ ಕಳವು ಪ್ರಕರಣಗಳೆಷ್ಟು ; ಶಿಕ್ಷೆಗೊಳಗಾದ ಪ್ರಕರಣಗಳೆಷ್ಟು ;

(ಆ) ವಿದ್ಯುತ್ ಕಳವು ಪ್ರಕರಣಗಳಲ್ಲಿ ಕಳೆದ ಮೂರು ವರ್ಷಗಳಿಂದ ವಸೂಲಿ ಮಾಡಿರುವ ದಂಡವೆಷ್ಟು;

(ಇ) ಶಿಕ್ಷೆಯ ರೂಪದಲ್ಲಿ ಬರೀ ದಂಡ ವಸೂಲಿ ಮಾಡುತ್ತಿರುವುದರಿಂದ ಕಳವು ಪ್ರಕರಣಗಳು ಜಾಸ್ತಿಯಾಗಿದ್ದು, ಇದಕ್ಕೆ ಶಿಕ್ಷೆಯನ್ನು ಕಡ್ಡಾಯಗೊಳಿಸಿ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಿ ಕಾನೂನು ತಿದ್ದುಪಡಿ ತರಲು ಕೈಗೊಂಡಿರುವ ಕ್ರಮಗಳೇನು ;

03396-2

(ಈ) ಇಲಾಖೆಯ ತಳಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳು ಕಳ್ಳತನಕ್ಕೆ ಕೈಜೋಡಿಸುತ್ತಿರುವುದರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

## ಸೌರ ವಿದ್ಯುತ್ ಚಾಲಿತ ಪಂಪ್‌ಸೆಟ್‌ಗಳಿಗೆ ಪ್ರೋತ್ಸಾಹ ಧನ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೭೯ (೧೭೨೫) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೈತರು ಸೌರ ವಿದ್ಯುತ್ ಚಾಲಿತ ನೀರಾವರಿ ಪಂಪ್‌ಸೆಟ್‌ಗಳ ಖರೀದಿಯನ್ನು ಪ್ರೋತ್ಸಾಹಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಆ) ಸೌರ ವಿದ್ಯುತ್ ಚಾಲಿತ ಪಂಪ್‌ಸೆಟ್‌ಗಳ ಖರೀದಿಗಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗಾಗಿ ಮತ್ತು ಇತರೆ ರೈತರಿಗಾಗಿ ೨೦೧೨–೧೩ ಮತ್ತು ೨೦೧೩–೧೪ರ ಮಾರ್ಚ್ ಅಂತ್ಯದವರೆವಿಗೆ ಎಷ್ಟೆಷ್ಟು ಮೊತ್ತದ ಸಹಾಯಧನ ನೀಡಲಾಗಿದೆ ;

(ಇ) ಕೃಷಿ ಕ್ಷೇತ್ರದಲ್ಲಿ ಸೋಲಾರ ಶಕ್ತಿ ಬಳಕೆಯ ಪ್ರಮಾಣ ಹೆಚ್ಚಿಸಲು ಯಾವ ಯಾವ ಉತ್ತೇಜನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ?

## ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿರುವ ರಾಷ್ಟ್ರೀಯ ಹೆದ್ದಾರಿ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೧೩೮೦ (೧೭೨೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಉದ್ದ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಕೇಂದ್ರ ಸರ್ಕಾರ ಹೊಸದಾಗಿ ಮಂಜೂರು ಮಾಡಿರುವ ರಾಷ್ಟ್ರೀಯ ಹೆದ್ದಾರಿ ಯಾವುವು (ಜಿಲ್ಲಾವಾರು, ರಸ್ತೆವಾರು ಮಾಹಿತಿ ಒದಗಿಸುವುದು) ;

(ಇ) ಹೊಸದಾಗಿ ಘೋಷಿಸಲಾಗಿರುವ ರಾಷ್ಟ್ರೀಯ ಹೆದ್ದಾರಿಗಳ ಅಂದಾಜು ಮೊತ್ತ ಎಷ್ಟು (ಪ್ರತಿ ಹೆದ್ದಾರಿವಾರು ಮಾಹಿತಿ ಒದಗಿಸುವುದು) ?

## ಹೈದ್ರಾಬಾದ ಕರ್ನಾಟಕ ಭಾಗದ ಹೆದ್ದಾರಿಗಳನ್ನು ಉನ್ನತೀಕರಿಸುವುದು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೧೩೮೧ (೧೭೨೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಯಾವ ರಸ್ತೆಗಳು ರಾಜ್ಯ ಹೆದ್ದಾರಿಗಳಿಂದ ರಾಷ್ಟ್ರೀಯ ಹೆದ್ದಾರಿಗಳೆಂದು ಉನ್ನತೀಕರಿಸಲಾಗಿದೆ ; ಹಾಗೂ ಎಷ್ಟು ಕಿ.ಮೀ. ರಸ್ತೆ ರಾಷ್ಟ್ರೀಯ ಹೆದ್ದಾರಿಯೆಂದು ಪರಿವರ್ತಿಸಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ರಾಷ್ಟ್ರೀಯ ಹೆದ್ದಾರಿಗಳೆಂದು ಉನ್ನತೀಕರಿಸಿದ ರಸ್ತೆಗಳಲ್ಲಿ ಹೈದ್ರಾಬಾದ್ ಕರ್ನಾಟಕ ಭಾಗದ ಯಾವ ರಸ್ತೆಗಳು ಒಳಗೊಂಡಿವೆ ; ಎಷ್ಟು ಅನುದಾನ ನಿಗದಿಪಡಿಸಿ ಬಿಡುಗಡೆ ಮಾಡಲಾಗಿದೆ (ವಿವರಿಸುವುದು) ?

**ಸಂಗಮ ಮತ್ತು ಮಾರ್ಕಂಡಯ್ಯ ಸಹಕಾರಿ ಸಕ್ಕರೆ ಕಾರ್ಖಾನೆಗಳು**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೮೨ (೧೭೪೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯ ಸಂಗಮ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಮಾರ್ಕಂಡಯ್ಯ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಗೊಳಿಸದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕಾರ್ಖಾನೆಗಳನ್ನು ಪ್ರಾರಂಭಿಸುವ ಕುರಿತು ಸರ್ಕಾರ ಆಡಳಿತ ಮಂಡಳಿಗಳ ಜೊತೆ ಕೈಗೊಂಡ ಕ್ರಮಗಳೇನು ; ಈ ಕಾರ್ಖಾನೆಗಳ ಯೋಜನಾ ವೆಚ್ಚ ಎಷ್ಟು ;

(ಇ) ಈ ಕಾರ್ಖಾನೆಗಳಿಗೆ ಸರ್ಕಾರವು ನೀಡಿದ ಷೇರು ಹಣ ಎಷ್ಟು; ಈ ಕಾರ್ಖಾನೆಗಳ ಸದ್ಯದ ಪರಿಸ್ಥಿತಿ ಕುರಿತು ವಿವರ ನೀಡುವುದು ; ಈ ಕಾರ್ಖಾನೆಗಳು ಯಾವ ವರ್ಷ ತಮ್ಮ ಕಬ್ಬು ನುರಿಸುವ ಹಂಗಾಮ ಪ್ರಾರಂಭಿಸಬಹುದಾಗಿದೆ ?

## ಸಹಕಾರ ತಳಹದಿಯ ಮೇಲೆ ಸ್ಥಾಪಿತಗೊಂಡ ಸಕ್ಕರೆ ಕಾರ್ಖಾನೆಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೩೮೩ (೧೭೪೩) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಹಕಾರ ತಳಹದಿಯ ಮೇಲೆ ಸ್ಥಾಪಿತಗೊಂಡ ಸಕ್ಕರೆ ಕಾರ್ಖಾನೆಗಳು ಎಷ್ಟು ; ಹಾಗಿದ್ದಲ್ಲಿ, ಇವುಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೀಡಿದ ಸಕ್ಕರೆ ಕಾರ್ಖಾನೆ ಎಷ್ಟು ; ಅವುಗಳ ಗುತ್ತಿಗೆ ಅವಧಿ ಎಷ್ಟು ವರ್ಷ ;

(ಆ) ಸರ್ಕಾರ ಕಾರ್ಖಾನೆಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡುವಾಗ ಯಾವ ನಿಯಮಗಳನ್ನು ಪಾಲಿಸಲಾಗಿದೆ ;

(ಇ) ಗುತ್ತಿಗೆ ಆಧಾರದ ಮೇಲೆ ನೀಡಿ ಸಹಕಾರಿ ಸಕ್ಕರೆ ಕಾರ್ಖಾನೆಗಳು ಎಷ್ಟು ; ಅವುಗಳ ಅವಧಿ ಎಷ್ಟು ವರ್ಷ ;

(ಈ) ಈಗಾಗಲೇ ಎಷ್ಟು ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ ; ಮತ್ತು ಯಾವಾಗ ಗುತ್ತಿಗೆ ಅವಧಿ ಮುಗಿಯುತ್ತದೆ (ಪ್ರತ್ಯೇಕವಾಗಿ ವಿವರಣೆ ನೀಡುವುದು) ;

(ಉ) ಕಾರ್ಖಾನೆಗಳನ್ನು ಗುತ್ತಿಗೆ ಪಡೆದ ಮಾಲೀಕರು ಸರ್ಕಾರದ ನಿಯಮಾವಳಿಗಳನ್ನು ಪಾಲಿಸುತ್ತಿದ್ದಾರೆಯೇ ; ಅವರಿಂದ ಸರ್ಕಾರಕ್ಕೆ ಬರತಕ್ಕ ಗುತ್ತಿಗೆ ಹಣವನ್ನು ಪಾವತಿ ಮಾಡುತ್ತಿದ್ದಾರೆಯೇ ; ಹಾಗಿದ್ದರೆ, ಇಲ್ಲಿಯವರೆಗೆ ಪಾವತಿ ಮಾಡಿದ ಹಣವೆಷ್ಟು ; ಬಾಕಿ ಉಳಿದ ಹಣವೆಷ್ಟು ?

**ಅಕಾಲಿಕ ಮಳೆಯಿಂದ ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಗಳ ಹಾನಿ**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೮೪ (೧೭೩೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕರ್ನಾಟಕದಲ್ಲಿ ಅಕಾಲಿಕ ಮಳೆಯಿಂದಾಗಿ ತೋಟಗಾರಿಕಾ ಬೆಳೆಗಳಾದ ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಗಳು ಹಾನಿಯಾಗಿ ರೈತರು ತೊಂದರೆಗೆ ಸಿಲುಕಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ಪ್ರದೇಶ ಹಾನಿಗೊಳಗಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ಹಾನಿಗೊಳಗಾದ ರೈತರಿಗೆ ಸರ್ಕಾರದಿಂದ ಪರಿಹಾರ ವಿತರಿಸಲಾಗಿದೆಯೇ ;

(ಈ) ಹಾಗಿದ್ದಲ್ಲಿ,, ಎಷ್ಟು ಜನ ರೈತರಿಗೆ ಪರಿಹಾರ ನೀಡಲಾಗಿದೆ ಮತ್ತು ಪ್ರತಿ ಹೆಕ್ಟೇರಿಗೆ ಪರಿಹಾರ ನೀಡಿದ ಮೊತ್ತವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ?

## ಟೋಲ್ ರಸ್ತೆಗಳಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೮೫ (೧೭೩೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ರಸ್ತೆಗಳಲ್ಲಿ ಟೋಲ್ ಸಂಗ್ರಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಹಾಗೂ ಟೋಲ್ ಸಂಗ್ರಹದ ವಿರುದ್ಧ ಸಾರ್ವಜನಿಕರು ಬೀದಿಗಿಳಿದು ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರವು ಕೈಗೊಂಡ ಕ್ರಮಗಳೇನು ;

(ಇ) ಟೋಲ್ ಸಂಗ್ರಹವನ್ನು ಸ್ಥಗಿತಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಸರ್ಕಾರ ಬದ್ಧವಿದೆಯೇ ?

## ರಾಜ್ಯ ಹೆದ್ದಾರಿಯನ್ನು ಮೇಲ್ದರ್ಜೆಗೇರಿಸುವುದು

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೮೬ (೧೭೩೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು–ಬಂಟ್ವಾಳ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಚಿಂತನೆ ನಡೆಸಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಪ್ರಕ್ರಿಯೆಯು ಯಾವ ಹಂತದಲ್ಲಿದೆ ; ಕಾಮಗಾರಿಯು ಯಾವಾಗ ಪ್ರಾರಂಭವಾಗುತ್ತದೆ (ಸಂಪೂರ್ಣ ವಿವರ ನೀಡುವುದು) ?

## ಹಂಗಾಮಿ ನೌಕರರುಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೩೮೭ (೧೭೩೩) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತೋಟಗಾರಿಕೆ ಇಲಾಖೆಯಲ್ಲಿ ಹಂಗಾಮಿ ನೌಕರರಾಗಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು ;

(ಆ) ಇವರಲ್ಲಿ ಕಳೆದ ೩೦ ವರ್ಷಗಳಿಂದಲೂ ಕಾರ್ಯ ನಿರ್ವಹಿಸಿ ನಿವೃತ್ತಿಯ ಹತ್ತಿರದ ವಯಸ್ಸಿನಲ್ಲಿರುವವರ ಸಂಖ್ಯೆ ಎಷ್ಟು ;

(ಇ) ಈ ರೀತಿಯ ನೌಕರರ ಗೌರವಯುತ ನಿವೃತ್ತಿಯ ಜೀವನಕ್ಕೆ ಸರ್ಕಾರವು ಏನು ವ್ಯವಸ್ಥೆ ಕಲ್ಪಿಸಿದೆ ?

## ಸಾರ್ವಜನಿಕ ಶೌಚಾಲಯಗಳ ನಿರ್ಮಾಣ

**ಶ್ರೀ ಎಸ್. ನಾಗರಾಜು (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೩೮೮ (೧೭೩೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತಾಲ್ಲೂಕು ಕೇಂದ್ರ ಹಾಗೂ ಪ್ರವಾಸಿ ಕೇಂದ್ರವಾದ ತಿರುಮಕೂಡಲು ನರಸೀಪುರದಲ್ಲಿ ಸಾರ್ವಜನಿಕ ಶೌಚಾಲಯಗಳ ಕೊರತೆ ಇದ್ದು

ಸಾರ್ವಜನಿಕರಿಗೆ ಹಾಗೂ ಪ್ರವಾಸಿಗರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನೈರ್ಮಲ್ಯ ಜಾಗೃತಿ ಆಂದೋಲನ ಮತ್ತು ನಿರ್ಮಲ ಭಾರತ ಅಭಿಯಾನ ಯೋಜನೆ ಮೇರೆಗೆ ಪಟ್ಟಣದ ಯಾವ ಯಾವ ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ ;

(ಇ) ಸದರಿ ಪಟ್ಟಣದ ಪಟ್ಟಣ ಪಂಚಾಯಿತಿ ಕಛೇರಿ, ತಾಲ್ಲೂಕು ಕಛೇರಿ, ಮಾರುಕಟ್ಟೆ ರಸ್ತೆ, ಅಗಸ್ತ್ಯೇಶ್ವರ ದೇವಾಲಯ, ಗುಂಜಾ ನರಸಿಂಹಸ್ವಾಮಿ ದೇವಾಲಯ, ಪಿಟೀಲ್ ಚೌಡಯ್ಯ ಸರ್ಕಲ್‌ಗಳಲ್ಲಿ ಸಾರ್ವಜನಿಕರು ಹಾಗೂ ಪ್ರವಾಸಿಗರ ಅನುಕೂಲಕ್ಕಾಗಿ ಶೌಚಾಲಯಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ವಿದ್ಯುತ್ ಸಮಸ್ಯೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೩೮೯ (೧೭೪೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅತೀ ಹೆಚ್ಚು ವಿದ್ಯುತ್ ಕೊರತೆ ಎದುರಿಸುತ್ತಿರುವ ಜಿಲ್ಲೆಗಳು ಯಾವುವು ;

(ಆ) ಪ್ರತಿ ಜಿಲ್ಲೆಗೂ ಹಂಚಿಕೆಯಾಗುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ಜಿಲ್ಲಾವಾರು ಪ್ರತಿದಿನಕ್ಕೆ ಪೂರೈಕೆ ಮಾಡುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು ; ೨–ಫೇಸ್, ೩–ಫೇಸ್ ಪ್ರತ್ಯೇಕ ವಿವರಗಳನ್ನು ನೀಡುವುದು ;

(ಈ) ರಾಜ್ಯದಲ್ಲಿರುವ ವಿದ್ಯುತ್ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮವೇನು ;

(ಉ) ಕೊಪ್ಪಳ ಜಿಲ್ಲೆಯಲ್ಲಿ ವಿದ್ಯುತ್ ಸಮಸ್ಯೆಯೇನಾದರೂ ಇದೆಯೇ ; ಇದ್ದಲ್ಲಿ, ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮವೇನು ?

## ಹೆಸ್ಕಾಂ ವಿಭಾಗದಲ್ಲಿ ಟ್ರಾನ್ಸ್ ಫಾರ್ವರ್‌ಗಳ ಪೂರೈಕೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೩೯೦ (೧೭೬೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇಂಡಿ ಹೆಸ್ಕಾಂ ವಿಭಾಗದಲ್ಲಿ ಕಳೆದ ಎರಡು ವರ್ಷದಲ್ಲಿ ಇಲ್ಲಿಯವರೆಗೂ ಯಾವ ಯಾವ ಸಾಮರ್ಥ್ಯದಲ್ಲಿ ಎಷ್ಟು ಟ್ರಾನ್ಸ್ ಫಾರ್ವರ್‌ಗಳು ಸುಟ್ಟಿವೇ ;

(ಆ) ಅವುಗಳ ಪೈಕಿ ಎಷ್ಟು ಟ್ರಾನ್ಸ್ ಫಾರ್ವರ್‌ಗಳನ್ನು ಈವರೆಗೆ ಒದಗಿಸಲಾಗಿದೆ ;

(ಇ) ಇಲ್ಲಿಯವರೆಗೂ ಒದಗಿಸಲು ಬಾಕಿಯಿರುವ ಹಾಗೂ ಯಾವ ಯಾವ ಸಾಮರ್ಥ್ಯದ ಒಟ್ಟು ಟ್ರಾನ್ಸ್ ಫಾರ್ವರ್‌ಗಳೆಷ್ಟು ; ಒದಗಿಸದೆ ಇರಲು ಕಾರಣವೇನು ; ಈ ನಿಟ್ಟಿನಲ್ಲಿರುವ ನಿಯಮಾವಳಿಗಳೇನು ;

(ಈ) ಈ ವಿಭಾಗದಲ್ಲಿ ಟ್ರಾನ್ಸ್ ಫಾರ್ಮರ್ ಒದಗಿಸಲು ರೈತರಿಂದ ಲಂಚ ಕೇಳಿದ ದೂರುಗಳು ಬಂದಿದೆಯೇ ; ಬಂದಿದ್ದರೆ, ತೆಗೆದುಕೊಂಡ ಕ್ರಮವೇನು ;

(ಉ) ಟ್ರಾನ್ಸ್ ಫಾರ್ಮರ್ ಕೇಳಲು ಹೋದ ರೈತರೊಂದಿಗೆ ರೈತ ಸಂಘದ ಪದಾಧಿಕಾರಿಗಳೊಂದಿಗೆ ಸಂಬಂಧಪಟ್ಟ ಕಾರ್ಯಪಾಲಕ

ಅಭಿಯಂತರರು ಅನುಚಿತವಾಗಿ ವರ್ತಿಸಿದ ದೂರುಗಳೇನಾದರೂ ಬಂದಿದೆಯೇ ?

## ಸಂಚಾರ ಯೋಗ್ಯವಲ್ಲದ ರಸ್ತೆಗಳ ಅಭಿವೃದ್ಧಿ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೩೯೧ (೧೭೬೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇಂಡಿ–ಸಿಂಧಗಿ ರಸ್ತೆ ಹಾಳಾಗಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ; ಅದನ್ನು ಸರಿಪಡಿಸಲು ಸರ್ಕಾರ ತೆಗೆದು ಕೊಳ್ಳುತ್ತಿರುವ ಕ್ರಮವೇನು ;

(ಆ) ದೇವರ ಹಿಪ್ಪರಗಿ–ತಾಳಕೋಟೆ, ಮನಗೂಳಿ–ದೇವಲಾಪುರ ಕ್ರಾಸ್ ರಸ್ತೆ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸರಿಪಡಿಸಲು ತೆಗೆದುಕೊಂಡಿರುವ ಕ್ರಮವೇನು ;

(ಇ) ಮನಗೂಳಿ–ದೇವಾಪುರ ಕ್ರಾಸ್ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಈ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು (ಸಂಪೂರ್ಣ ವಿವರ ನೀಡುವುದು) ?

## ದೇವರ ಹಿಪ್ಪರಗಿಯ ಅವೈಜ್ಞಾನಿಕ ರಸ್ತೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೩೯೨ (೧೭೩೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಜಾಪೂರ ಜಿಲ್ಲೆಯ ದೇವರ ಹಿಪ್ಪರಗಿಯಿಂದ ಸಿಂಧಗಿ ನಗರಕ್ಕೆ ಹೋಗುವ ರಸ್ತೆಯಲ್ಲಿನ ದೇವರ ಹಿಪ್ಪರಗಿ ಮಲ್ಲಯ್ಯನ ಗುಡಿ

ಹತ್ತಿರದ ಕ್ರಾಸ್‌ನಲ್ಲಿ ಕಳೆದ ೦೨ ವರ್ಷಗಳಿಂದ ಎಷ್ಟು ಅಪಘಾತಗಳು ಸಂಭವಿಸಿವೇ ;

(ಆ) ಈ ರೀತಿಯ ಅಪಘಾತಗಳು ಸಂಭವಿಸುವುದಕ್ಕೆ ಅವೈಜ್ಞಾನಿಕ ರಸ್ತೆಯ ನಿರ್ಮಾಣ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮವೇನು ?

## ೨೨೦ ಕೆ.ವಿ. ಪವರ್ ಗ್ರೀಡ್ ಸ್ಥಾಪನೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :-**

೧೩೯೩ (೧೭೬೭ಎ) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿಜಾಪುರ ಜಿಲ್ಲೆಯಲ್ಲಿ ೨೨೦ ಕೆ.ವಿ.ಯ ಪವರ್ ಗ್ರೀಡ್ ಸ್ಟೇಷನ್‌ಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆ ; ಸ್ಥಾಪಿಸುವ ಪ್ರಸ್ತಾವನೆ ಇರುವ ಸ್ಥಳಗಳಾವುವು ;

(ಆ) ಸಿಂದಗಿ ನಗರದಲ್ಲಿ ೨೨೦ ಕೆ.ವಿ.ಯ ಸ್ಟೇಷನ್ ಸ್ಥಾಪನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಈ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು ;

(ಇ) ಸಿಂದಗಿಯ ಉಪ ವಿಭಾಗವನ್ನು ವಿಭಾಗವಾಗಿ ಮೇಲ್ದರ್ಜೆಗೇರಿಸಿ ಆಲಮೇಲಕ್ಕೊಂದು ಎ.ಎ. ವಿಭಾಗವನ್ನು ಆರಂಭಿಸುವ ಚಿಂತನೆ ಸರ್ಕಾರಕ್ಕೆ ಇದೆಯೇ ;

(ಈ) ಈ ಉಪ ವಿಭಾಗದಲ್ಲಿ ಅಗತ್ಯವಿರುವ ಸಿಬ್ಬಂದಿ ಹುದ್ದೆಗಳೆಷ್ಟು ; ಮಂಜೂರಾದ ಹುದ್ದೆಗಳು ಎಷ್ಟು ; ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು (ಹುದ್ದೆವಾರು ವಿವರ ನೀಡುವುದು) ?

## ರೈತರ ಬೆಳೆಗಳಿಗೆ ಸೇವಾ ಶುಲ್ಕ ರದ್ದುಪಡಿಸುವಿಕೆ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೩೯೪ (೧೭೪೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗುಣಮಟ್ಟದ ಉತ್ಪನ್ನಗಳನ್ನು ಬೆಳೆಯುವಂತೆ ರೈತರಿಗೆ ಮನವರಿಕೆ ಮಾಡಿಕೊಡಲು ಮಾರುಕಟ್ಟೆ ವ್ಯವಸ್ಥೆ ಸೇರಿದಂತೆ ಸರ್ಕಾರ ಯಾವ ಯೋಜನೆ ಜಾರಿಗೆ ತರಲು ಚಿಂತನೆ ನಡೆಸಿದೆ ;

(ಆ) ಇದಕ್ಕಾಗಿ ಕೃಷಿ ಮಾರುಕಟ್ಟೆ ಹಾಗೂ ತೋಟಗಾರಿಕೆ ಇಲಾಖೆಗಳಿಗೆ ಹೊಸ ರಫ್ತು ನೀತಿಯನ್ನು ಅಳವಡಿಸಲು ಸರ್ಕಾರ ಸಿದ್ಧವಿದೆಯೇ (ಮಾಹಿತಿ ಒದಗಿಸುವುದು) ;

(ಇ) ಕೃಷಿ ಮಾರುಕಟ್ಟೆ ಇಲಾಖೆಯಿಂದ ಕಳೆದ ಒಂದು ವರ್ಷದ ಅವಧಿಯಲ್ಲಿ ಸಂಗ್ರಹವಾದ ಆದಾಯ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಈ) ಸದರಿ ಬೆಳೆಗಳಿಗೆ ಮಾರುಕಟ್ಟೆ ಶುಲ್ಕ, ಸೇವಾ ಶುಲ್ಕಗಳನ್ನು ರದ್ದುಪಡಿಸುವ ವಿಚಾರ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಯಾವಾಗಿನಿಂದ ಜಾರಿಗೆ ಬಂದಿದೆ (ಮಾಹಿತಿ ನೀಡುವುದು) ?

## ರೈತರಿಗೆ ಶೂನ್ಯ ಬಡ್ಡಿದರದ ಸಾಲ ಯೋಜನೆ ವಿಸ್ತರಣೆ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೩೯೫ (೧೭೩೯) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರಿಗೆ ಶೂನ್ಯ ಬಡಿದರದಲ್ಲಿ ಸಾಲ ನೀಡುವ ಯೋಜನೆ ಅನುಷ್ಠಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ಯೋಜನೆಯಡಿ ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾ ಕೇಂದ್ರ ಸಹಕಾರಿ, ಬ್ಯಾಂಕ್ ಮುಖಾಂತರ ಶೂನ್ಯ ಬಡ್ಡಿ ಹಾಗೂ ಶೇ.೩ ದರದ ಸಾಲವನ್ನು ರೈತರಿಗೆ ವಿತರಣೆ ಮಾಡಿರುವುದು ನಿಜವೇ ;

(ಇ) ಹಾಗಿದ್ದಲ್ಲಿ, ಎಂದಿನಿಂದ ಸಾಲ ನೀಡಲಾಗಿರುತ್ತದೆ (ವಿವರ ನೀಡುವುದು) ;

(ಈ) ಶೂನ್ಯ ಬಡ್ಡಿದರದ ಹಾಗೂ ಶೇ.೩ರ ಸಾಲದ ಯೋಜನೆಯನ್ನು ಪುನಃ ವಿಸ್ತರಿಸುವ ಇರಾದೆ ಸರ್ಕಾರದ ಮುಂದಿದೆಯೇ ;

(ಉ) ಈ ಸಾಲ ಯೋಜನೆಯಡಿ ಫಲಾನುಭವಿ ರೈತರ ವಿವರಗಳನ್ನು ಹೆಸರು, ವಿಳಾಸ, ಸಾಲ ನೀಡಿದ ದಿನಾಂಕ, ಸಾಲ ಪಡೆದ ಮೊತ್ತವಾರು ಬೀದರ್ ಜಿಲ್ಲೆಯ ತಾಲ್ಲೂಕುವಾರು ಪೂರ್ಣ ವಿವರಗಳನ್ನು ಒದಗಿಸುವುದು ;

(ಊ) ಈ ಯೋಜನೆ ಪ್ರಾರಂಭವಾದಾಗಿನಿಂದ ಈ ತನಕ ವರ್ಷವಾರು ಮಾಹಿತಿ ನೀಡಲಾಗುವುದೇ (ಸಮಗ್ರ ಮಾಹಿತಿಯೊಂದಿಗೆ) ?

## ಬೀದರ್ ಜಿಲ್ಲಾ ಸಹಕಾರಿ ಬ್ಯಾಂಕ್

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೩೯೬ (೧೭೩೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ (ಡಿ.ಸಿ.ಸಿ) ಬ್ಯಾಂಕ್ ಅಡಿಯಲ್ಲಿ ಅಂತರ ರಾಜ್ಯ ಸಹಕಾರಿ ಕಾಯ್ದೆ ಅನ್ವಯ ಸಹಕಾರಿ ಆಸ್ಪತ್ರೆ ಪ್ರಾರಂಭ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಆ ಸಹಕಾರಿ ಆಸ್ಪತ್ರೆಯ ಹೆಸರೇನು ; ಅದರ ವಿಳಾಸ/ ವಿಸ್ತೀರ್ಣ ಎಷ್ಟು ;

(ಇ) ಈ ಸಹಕಾರಿ ಆಸ್ಪತ್ರೆ ಪ್ರಾರಂಭಿಸುವುದಕ್ಕೆ ಕೇಂದ್ರ/ರಾಜ್ಯ ಸರ್ಕಾರದ ಅನುಮತಿ ದೊರಕಿದೆಯೇ ;

(ಈ) ಈ ಸಹಕಾರಿ ಆಸ್ಪತ್ರೆಗೆ ಅನುಮತಿ ದೊರೆತಲ್ಲಿ ಅವುಗಳ ದಿನಾಂಕ ಮತ್ತು ಅನುಮತಿಯ ದಾಖಲೆಗಳ ಪತ್ರದ ಫೋಟೋ ಕಾಪಿಯ ಮಾಹಿತಿ ನೀಡುವುದು ;

(ಉ) ಈ ಆಸ್ಪತ್ರೆಗೆ ಇಲ್ಲಿಯವರೆಗೆ ಎಷ್ಟು ಷೇರು ಹಣ ಸಂಗ್ರಹವಾಗಿದೆ ; ಷೇರು ಸಂಗ್ರಹ ಮಾಡಿಕೊಂಡಲ್ಲಿ ಷೇರುದಾರರ ಹೆಸರು/ವಿಳಾಸ/ ದಿನಾಂಕದ ಪ್ರತಿ ಯಾರ್‍ಯಾರಿಂದ ಎಷ್ಟು ; (ವರ್ಷವಾರು ಷೇರು ಸಂಗ್ರಹವಾದ ಸಂಪೂರ್ಣ ಮಾಹಿತಿಯ (ದಾಖಲೆಗಳೊಂದಿಗೆ) ವಿವರ ಒದಗಿಸುವುದು ?

## ತೋಟಗಾರಿಕಾ ಯೋಜನೆಗಳು

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೩೯೭ (೧೪೬೬) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸಣ್ಣ, ಅತೀ ಸಣ್ಣ ಮತ್ತು ದೊಡ್ಡ ರೈತರಿಗೆ ತೋಟಗಾರಿಕೆ ಇಲಾಖಾ ವತಿಯಿಂದ ಇರುವ ವಿವಿಧ ಯೋಜನೆಗಳಲ್ಲಿ ಇರುವ ಸವಲತ್ತುಗಳು ಯಾವುವು ;

(ಆ) ಈ ಸವಲತ್ತು ಬಗ್ಗೆ ರೈತರಿಗೆ ಮಾಹಿತಿ ಇಲ್ಲದೆ, ಸೂಕ್ತ ಪ್ರಚಾರ ಇಲ್ಲದೆ ಈ ಸೌಲಭ್ಯಗಳಿಂದ ಅನೇಕ ರೈತರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ರೈತರು ವಂಚಿತರಾಗುವುದನ್ನು ತಪ್ಪಿಸಲು ಕೈಗೊಂಡ ಕ್ರಮಗಳೇನು ?

## ವಕ್ಫ್ ಇಲಾಖೆಗೆ ಆಯವ್ಯಯದಲ್ಲಿ ಮೀಸಲಿಟ್ಟ ಹಣ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೩೯೮ (೧೭೪೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗಾಗಿ ೨೦೧೩–೧೪ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟ ಹಣವೆಷ್ಟು ; ಅವುಗಳಲ್ಲಿ ಈವರೆವಿಗೂ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; ಬಿಡುಗಡೆ ಮಾಡಿದ

ಹಣದಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಯಾವ ಯಾವ ಉದ್ದೇಶಕ್ಕಾಗಿ ನೀಡಲಾಗಿದೆ (ಸಂಪೂರ್ಣ ವಿವರಗಳೊಂದಿಗೆ ಜಿಲ್ಲಾವಾರು ವಿವರ ನೀಡುವುದು) ;

(ಆ) ಯಾವ ಮಾನದಂಡದ ಆಧಾರದ ಮೇಲೆ ಪ್ರತಿ ಜಿಲ್ಲೆಗೆ ಈ ಹಣವನ್ನು ಹಂಚಿಕೆ ಮಾಡಲಾಗುವುದು ;

(ಇ) ಸರ್ಕಾರವು ಕಳೆದ ಅಧಿವೇಶನದಲ್ಲಿ ಸರ್ವೆ ಕಾರ್ಯವನ್ನು ಮಾರ್ಚ್– ೨೦೧೪ರ ಅವಧಿಯೊಳಗೆ ಪೂರ್ಣಗೊಳಿಸಲಾಗುವುದೆಂದು ಭರವಸೆ ನೀಡಿರುವಂತೆ ರಾಜ್ಯದ ವಕ್ಫ್ ಆಸ್ತಿಗಳ ಸರ್ವೆ ಕಾರ್ಯವು ಸಂಪೂರ್ಣಗೊಂಡಿದೆಯೇ ; ಇಲ್ಲದಿದ್ದಲ್ಲಿ ಇನ್ನು ವಿಳಂಬ ಮಾಡುತ್ತಿರಲು ಕಾರಣವೇನು ;

(ಈ) ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ರಚಿತಗೊಂಡಿರುವ ಕಾರ್ಯ ಪಡೆಯ ಸದಸ್ಯರು ಯಾರು ಯಾರು ; ಸದರಿ ಕಾರ್ಯಪಡೆಯು ಈವರೆವಿಗೂ ಎಷ್ಟು ಸಭೆಗಳನ್ನು ನಡೆಸಿದೆ ; ಸದರಿ ಸಭೆಗಳಿಗೆ ಸ್ಥಳೀಯ ಶಾಸಕರನ್ನು ಆಹ್ವಾನಿಸಲಾಗುತ್ತಿದೆಯೇ ; ಇಲ್ಲವಾದಲ್ಲಿ, ಅದಕ್ಕೆ ಕಾರಣವೇನು ; ಸದರಿ ಸಭೆಗಳಲ್ಲಿ ಚರ್ಚಿಸಿದ ವಿಷಯಗಳು ಯಾವುವು ; ಸದರಿ ಕಾರ್ಯಪಡೆಯು ಈವರೆವಿಗೂ ಎಷ್ಟು ವರದಿ ನೀಡಿದೆ ; ಹಾಗೂ ಸದರಿ ವರದಿ ಆಧಾರದ ಮೇಲೆ ಸರ್ಕಾರವು ಕೈಗೊಂಡ ಕ್ರಮವೇನು ;

(ಉ) ವಕ್ಫ್ ಮಂಡಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಇತ್ಯರ್ಥ ಮಾಡಲು ವಕ್ಫ್ (ತಿದ್ದುಪಡಿ) ನಿಯಮ ೨೦೧೩ರಲ್ಲಿ Multi Member Tribunal ರಚನೆ ಮಾಡಿ ಒಂದು ವರ್ಷ ಕಳೆದರೂ ಈವರೆವಿಗೂ ಸದರಿ Multi Member Tribunal ಕಾರ್ಯನಿರ್ವಹಿಸದೆ ಇರಲು ಕಾರಣವೇನು ; ಇದರಿಂದ ವಕ್ಫ್ ಮಂಡಳಿಗೆ ಸಂಬಂಧಿಸಿದ

ವ್ಯಾಜ್ಯಗಳು ದಿನೇ ದಿನೇ ಹೆಚ್ಚಾಗುತ್ತಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಯಶಸ್ವಿನಿ ವಿಮಾ ಯೋಜನೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೧೩೯೯ (೧೭೫೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಶಸ್ವಿನಿ ವಿಮಾ ಯೋಜನೆಯಲ್ಲಿ ನೋಂದಣಿ ಮಾಡಿಕೊಳ್ಳಲು ಸರ್ಕಾರ ನಿಗದಿಪಡಿಸಿರುವ ಮಾನದಂಡವೇನು (ವಿವರಗಳೊಡನೆ) ;

(ಆ) ಯಶಸ್ವಿನಿ ವಿಮಾ ಯೋಜನೆಯಡಿ ಯಾವ ಯಾವ ಖಾಯಿಲೆಗಳಿಗೆ ಯಾವ ಸೌಲಭ್ಯಗಳನ್ನು ಕಲ್ಪಸಲಾಗಿದೆ (ವಿವರಗಳೊಡನೆ) ;

(ಇ) ರಾಜ್ಯದ ಸಹಕಾರಿ ಸಂಘ ಹಾಗೂ ಬ್ಯಾಂಕ್‌ಗಳ ಮೂಲಕ ಕಳೆದ ಮೂರು ವರ್ಷಗಳಿಂದ ಯಶಸ್ವಿನಿ ವಿಮಾ ಯೋಜನೆಯಲ್ಲಿ ನೋಂದಣಿ ಮಾಡಿಕೊಂಡಿರುವ ಸದಸ್ಯರ ಒಟ್ಟು ಸಂಖ್ಯೆ ಎಷ್ಟು; ಸದರಿಯವರಿಂದ ಎಷ್ಟು ಮೊತ್ತ ಸಂಗ್ರಹಣೆಯಾಗಿದೆ (ವರ್ಷವಾರು ವಿವರಗಳೊಡನೆ) ;

(ಈ) ಸದರಿ ಅವಧಿಯಲ್ಲಿ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡವರ ಸಂಖ್ಯೆ ಎಷ್ಟು ; ಸದರಿ ಫಲಾನುಭವಿಗಳಿಗೆ ಭರಿಸಲಾದ ಮೊತ್ತವೆಷ್ಟು (ವರ್ಷಾವಾರು ಮಾಹಿತಿ) ?

## ಗೊಬ್ಬರ ಮಾರಾಟದಲ್ಲಿ ರೈತರಿಗೆ ವಂಚನೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೪೦೦ (೧೭೭೭) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾವಯವ ಗೊಬ್ಬರವೆಂದು ರಸಗೊಬ್ಬರವನ್ನು ಮಾರಾಟ ಮಾಡಿ ರೈತರಿಗೆ ವಂಚನೆ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅಂತಹವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು) ?

## ಮಾವು ಮಂಡಳಿ ಬಗ್ಗೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೪೦೧ (೧೭೭೯) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಾವು ಮಂಡಳಿ ಸ್ಥಾಪಿಸಲಾಗಿದೆಯೇ ; ಸ್ಥಾಪಿಸಿದ್ದಲ್ಲಿ ಅದರ ವಿಳಾಸ, ರೂಪುರೇಷೆಗಳೇನು ;

(ಆ) ಮಾವು ಮಂಡಳಿಯ ಕಾರ್ಯ ವ್ಯಾಪ್ತಿ ಏನು ; ಮಾವು ಬೆಳೆಗಾರರಿಗೆ ಬೆಂಬಲ ಬೆಲೆ ನೀಡುವಲ್ಲಿ ಈ ಮಂಡಳಿಯ ಪಾತ್ರವೇನು ;

(ಇ) ಮಾವಿನ ಹಣ್ಣಿನ ವಿಲೇವಾರಿಯಲ್ಲಿ ಸದರಿ ಮಂಡಳಿಯ ಪಾತ್ರವೇನು ಹಾಗೂ ಮಾವಿನ ಮಂಡಳಿಯ ಆರ್ಥಿಕ ಸಬಲತೆ ಎಷ್ಟು ?

## ವಿದ್ಯುತ್ ಉತ್ಪಾದನೆಯ ಮೂಲಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೪೦೨ (೧೭೫೬) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಮೂಲಗಳಾವುವು ;

(ಆ) ರಾಜ್ಯಕ್ಕೆ ಅವಶ್ಯವಿರುವ ಹಾಗೂ ಬೇಡಿಕೆ ಇರುವ ವಿದ್ಯುತ್ ಪ್ರಮಾಣ ಎಷ್ಟು ಹಾಗೂ ಉತ್ಪಾದಿಸಲಾಗುತ್ತಿರುವ ಪ್ರಮಾಣ ಎಷ್ಟು ;

(ಇ) ಕೊರತೆ ಬೀಳುವ ವಿದ್ಯುತ್‌ನ್ನು ಖರೀದಿಸಿರುವ ಪದ್ಧತಿ ಯಾವುದು ಹಾಗೂ ಅದರ ಮಾನದಂಡವೇನು ?

## ಕಳಪೆ ಬೀಜ ವಿತರಕರು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೪೦೩ (೧೭೭೮) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳಪೆ ಬೀಜ ವಿತರಣೆ ಮಾಡಿ, ರೈತರಿಗೆ ಅಪಾರ ಹಾನಿಯನ್ನುಂಟು ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಳಪೆ ಬೀಜ ವಿತರಣೆ ಮಾಡಿದವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಜಿಲ್ಲಾವಾರು ವಿವರ ನೀಡುವುದು) ;

(ಇ) ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಅನುಷ್ಠಾನಗೊಂಡ ಕೃಷಿ ಕಾರ್ಯಕ್ರಮಗಳು

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೦೪ (೧೭೫೯) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಪ್ರಸಕ್ತ ವರ್ಷಕ್ಕೆ ಕೃಷಿ ಇಲಾಖೆಯಿಂದ ಅನುಷ್ಠಾನಗೊಂಡ ಕಾರ್ಯಕ್ರಮಗಳಾವುವು (ತಾಲ್ಲೂಕುವಾರು) ;

(ಆ) ಈ ಯೋಜನೆಗಳಿಗೆ ಸರ್ಕಾರವು ನಿಗದಿಪಡಿಸಿದ ಮೊತ್ತವೆಷ್ಟು (ತಾಲ್ಲೂಕುವಾರು) ;

(ಇ) ಕಳೆದ ವರ್ಷ ಅನುಷ್ಠಾನಗೊಂಡ ಕಾರ್ಯಕ್ರಮಗಳಾವುವು ; ಅವುಗಳಿಗೆ ಬಿಡುಗಡೆಯಾದ ಮೊತ್ತವೆಷ್ಟು ; ಅನುಷ್ಠಾನಗೊಂಡ ಕಾರ್ಯಕ್ರಮಗಳನ್ನು ಸರಿಪೂರ್ಣಗೊಳಿಸಲಾಗಿದೆಯೇ ?

## ಲೋಕೋಪಯೋಗಿ ಕಾಮಗಾರಿಗಳಿಗೆ ಅನುದಾನ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೦೫ (೧೭೫೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ೨೦೧೩–೨೦೧೪ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಬಿಡುಗಡೆಯಾದ ಒಟ್ಟು ಅನುದಾನವೆಷ್ಟು ; (ಅನುದಾನದ ಪೂರ್ಣ ವಿವರ, ಲೆಕ್ಕ ಶೀರ್ಷಿಕೆವಾರು, ಯೋಜನಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಆ) ಇದರಲ್ಲಿ ಯಾವ ಯಾವ ಯೋಜನೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು) ;

(ಇ) ಇನ್ನೂ ಯಾವ ಯಾವ ಯೋಜನೆಗಳಿಗೆ ಹಣ ಬಿಡುಗಡೆ ಮಾಡಬೇಕಾಗಿದೆ (ತಾಲ್ಲೂಕುವಾರು ವಿವರಗಳೊಂದಿಗೆ) ;

(ಈ) ಬಿಡುಗಡೆಯಾದ ಮೊತ್ತದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು) ?

## ತೋಟಗಾರಿಕೆ ಫಾರಂಗಳು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೦೬ (೧೭೫೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ತೋಟಗಾರಿಕೆ ಫಾರಂಗಳಿವೆ ; ಎಲ್ಲೆಲ್ಲಿ (ವಿವರ ನೀಡುವುದು) ;

(ಆ) ಫಾರಂಗಳ ಕಾರ್ಯ ಚಟುವಟಿಕೆಗಳೇನು (ವಿವರ ನೀಡುವುದು) ;

(ಇ) ಇಲ್ಲಿರುವ ಮಂಜೂರಾದ ಹುದ್ದೆಗಳೆಷ್ಟು ; ಪ್ರಸ್ತುತ ಭರ್ತಿ ಮತ್ತು ಖಾಲಿಯಿರುವ ಹುದ್ದೆಗಳ ವಿವರ ನೀಡುವುದು (ಫಾರಂವಾರು ವಿವರ ನೀಡುವುದು) ;

(ಈ) ಖಾಲಿಯಿರುವ ಹುದ್ದೆ ಭರ್ತಿ ಮಾಡಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಿದೆ ?

## ಕೃಷಿ ವಿಶ್ವವಿದ್ಯಾನಿಲಯ ಹಾಗೂ ಕೃಷಿ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೦೭ (೧೭೬೩) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾನಿಯಲಯಗಳು ಮತ್ತು ಕೃಷಿ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರಗಳು ಎಷ್ಟು ; ಮತ್ತು ಯಾವುವು ;

(ಆ) ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಕೃಷಿ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರಗಳಿಂದ ವಿವಿಧ ಪ್ರಾದೇಶಿಕ ಬೆಳೆಗಳ ಸಂಶೋಧನೆ ಮಾಡಲಾಗಿದೆಯೇ ; ಮಾಡಲಾಗಿದ್ದಲ್ಲಿ ಯಾವುವು ; ಮತ್ತು ಇವುಗಳನ್ನು ಸಂಶೋಧಿಸಿದ್ದು ಯಾವಾಗ ; (ಸಂಶೋಧನೆ ಮಾಡಿದ ವರ್ಷ, ಬೆಳೆ, ಕೃಷಿ, ವಿಶ್ವವಿದ್ಯಾನಿಲಯ ಹಾಗೂ ಕೃಷಿ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರವಾರು ವಿವರ ನೀಡುವುದು) ;

(ಇ) ಇಂತಹ ಸಂಶೋಧಿತ ಪ್ರಾದೇಶಿಕ ಬೆಳೆಗಳಲ್ಲಿ ರೈತರು ಹೊಲಗಳಲ್ಲಿ ಯಶಸ್ವಿಯಾದವುಗಳು ಯಾವುವು ;

(ಈ) ರಾಜ್ಯದ ಕರಾವಳಿ ಭಾಗದಲ್ಲಿ ಸದ್ರಿ ಹಂಗಾಮಿನಲ್ಲಿ ಮಳೆಯ ಅಭಾವದಿಂದ ಬಿತ್ತನೆ ಭತ್ತದ ಅವಧಿ ಮೀರಿದ್ದು, ಶೇ.೭೫ರಷ್ಟು ಪ್ರದೇಶವು ಭತ್ತದ ನಾಟಿಗೆ ಸಾಧ್ಯವಾಗದ ಹಿನ್ನೆಲೆಯಲ್ಲಿ ಅಲ್ಪಾವಧಿ ಭತ್ತದ ಬೀಜಗಳ ಶೀಘ್ರ ಪೂರೈಕೆ ಹಾಗೂ ಪರ್ಯಾಯ ಬೆಳೆಗೆ ಇಲಾಖೆ ಕೈಗೊಂಡ ಕ್ರಮಗಳೇನು ?

## ರೈತರು ನೀರಾವರಿಗಾಗಿ ಬಳಸುತ್ತಿರುವ ಸೌರ ಪಂಪು ಸೆಟ್‌ಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೦೮ (೧೭೬೨) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ರೈತರು ನೀರಾವರಿಗಾಗಿ ಸೌರ ಪಂಪು ಸೆಟ್ಟುಗಳನ್ನು ಬಳಸುತ್ತಿದ್ದಾರೆಯೇ ; ಈ ಮಾಹಿತಿಯನ್ನು ಪಡೆಯಲು ಇಲಾಖೆಯಲ್ಲಿರುವ ಸೌಲಭ್ಯಗಳು ಯಾವುವು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ರಾಜ್ಯದಲ್ಲಿ ರೈತರು ಬಳಸುವ ನೀರಾವರಿ ಪಂಪು ಸೆಟ್ಟು ಘಟಕಗಳಿಗೆ ಸರ್ಕಾರವು ವಿಶೇಷ ಸಹಾಯ ಧನವನ್ನು ನೀಡುವುದೇ ; ನೀಡಲಾಗುತ್ತಿದ್ದಲ್ಲಿ ಯಾವುವು ; ಇಲ್ಲವಾದಲ್ಲಿ ಕಾರಣವೇನು ;

(ಇ) ರಾಜ್ಯದಲ್ಲಿ ಸೌರ ಪಂಪು ಸೆಟ್ಟುಗಳ ಬ್ಯಾಟರಿಗಳು ಕಳುವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ, ಇದನ್ನು ತಡೆಗಟ್ಟಲು ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲಾಗುವುದೇ ?

## ಕೃಷಿ ಸಾಲಕ್ಕೆ ಸಂಗ್ರಹಿಸಿದ ಸೇವಾ ಶುಲ್ಕ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೦೯ (೧೭೬೪) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೨-೧೩ ಮತ್ತು ೨೦೧೩-೧೪ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ವಿತರಣೆ ವೇಳೆಯಲ್ಲಿ ಕೃಷಿ ಪತ್ತಿನ ಸಹಕಾರಿ

ಸಂಘಗಳು ರೈತರಿಂದ ಸಂಗ್ರಹಿಸಿದ ಸೇವಾ ಶುಲ್ಕವೆಷ್ಟು (ಸಹಕಾರಿ ಸಂಘವಾರು ವಿವರ ನೀಡುವುದು) ;

(ಆ) ದಕ್ಷಿಣ ಕನ್ನಡ ಜಿಲ್ಲೆ ಕೇಂದ್ರ ಸಹಕಾರಿ ಬ್ಯಾಂಕು ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಕೃಷಿ ಸಾಲಗಳಿಗೆ ಸ್ವೀಕರಿಸಿದ ಸೇವಾ ಶುಲ್ಕವೆಷ್ಟು ; ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸ್ವೀಕರಿಸಿದ ಸೇವಾ ಶುಲ್ಕದಲ್ಲಿ ಹಿಂದಿರುಗಿಸಿದ ಮೊತ್ತವೆಷ್ಟು (ತಾಲ್ಲೂಕುವಾರು, ಸಂಘವಾರು ವಿವರ ನೀಡುವುದು) ;

(ಇ) ಉಡುಪಿ ಜಿಲ್ಲೆಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಂದ ಕೃಷಿ ಸಾಲಗಳಿಗೆ ಸ್ವೀಕರಿಸಿದ ಸೇವಾ ಶುಲ್ಕದಲ್ಲಿ ರೈತರಿಗೆ ಮರುಪಾವತಿಸಿದ ಮೊತ್ತವೆಷ್ಟು ;

(ಈ) ಸರ್ಕಾರಿ ಆದೇಶಕ್ಕೆ ವ್ಯತಿರಿಕ್ತವಾಗಿ ರೈತರಿಂದ ಸೇವಾ ಶುಲ್ಕ ವಸೂಲಿ ಮಾಡಿದ ಕೃಷಿ ಪತ್ತಿನ ಸಹಕಾರ ಸಂಘಗಳ ಮೇಲೆ ಸರ್ಕಾರ ಕೈಗೊಂಡ ಕಾನೂನು ಕ್ರಮಗಳೇನು ; ಇಲ್ಲವಾದಲ್ಲಿ, ರೈತರು ಪೊಲೀಸ್ ಠಾಣೆಯಲ್ಲಿ ಇದರ ವಿರುದ್ಧ ದೂರು ನೀಡಿದಲ್ಲಿ ಕ್ರಮಕೈಗೊಳ್ಳಲಾಗುವುದೇ ; ಇಲ್ಲವಾದಲ್ಲಿ ಕಾರಣವೇನು ?

## ಸಹಕಾರಿ ಸಂಘಗಳ ಮೇಲೆ ನಡೆದ ಲೋಕಾಯುಕ್ತರ ತನಿಖೆ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೧೦ (೧೭೩೧) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾನ್ಯ ಲೋಕಾಯುಕ್ತರು ಎಷ್ಟು ಸಹಕಾರಿ ಸಂಘಗಳ ಆಡಳಿತ ಮಂಡಳಿ

ಸದಸ್ಯರ ಮೇಲೆ ಮತ್ತು ಸಂಘದ ನೌಕರರ ಮೇಲೆ ತನಿಖೆ ನಡೆಸಿ ವರದಿ ಸಲ್ಲಿಸಿರುತ್ತಾರೆ; (ಜಿಲ್ಲಾವಾರು, ಸಹಕಾರಿ ಸಂಘವಾರು ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಲೋಕಾಯುಕ್ತರು ಸಲ್ಲಿಸಿದ ವರದಿಯ ಮೇಲೆ ಸರ್ಕಾರ ತೆಗೆದುಕೊಂಡ ಶಿಸ್ತುಕ್ರಮಗಳೇನು; ಸದರಿ ಮಂಡಳಿ ಸದಸ್ಯರು ಮತ್ತು ಸಂಘದ ನೌಕರರ ಮೇಲೆ ಇಲಾಖಾ ಶಿಸ್ತುಕ್ರಮದ ವಿರುದ್ಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆ ನೀಡಲ್ಪಟ್ಟ ಪ್ರಕರಣಗಳು ಎಷ್ಟು; ಮತ್ತು ಯಾವುವು; (ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆ ಪಡೆದ ಪ್ರಕರಣವಾರು, ತಡೆಯಾಜ್ಞೆ ನೀಡಲ್ಪಟ್ಟ ದಿನಾಂಕವಾರು ವಿವರ ನೀಡುವುದು) ;

(ಇ) ಮಾನ್ಯ ಉಚ್ಚನ್ಯಾಯಾಲಯದಿಂದ ನೀಡಲ್ಪಟ್ಟ ತಡೆಯಾಜ್ಞೆಗಳು ತೆರವಾಗದಿರಲು ಇಲಾಖೆಯ ನಿರ್ಲಕ್ಷ್ಯ ಕಾರಣವೇ?

## ಹೊಸದಾಗಿ ರಚಿತವಾಗಲಿರುವ ನಗರಸಭೆಗಳು

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೧೧ (೧೭೬೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ನಗರಸಭೆಗಳನ್ನು ರಚಿಸಲು ಇರುವ ಮಾನದಂಡವೇನು; ನಗರಸಭೆಗಳನ್ನು ರಚಿಸಲು ಕನಿಷ್ಠ ಎಷ್ಟು ಜನಸಂಖ್ಯೆಯ ಅವಶ್ಯಕತೆಯಿದೆ;

(ಆ) ರಾಜ್ಯದಲ್ಲಿ ಹೊಸದಾಗಿ ಎಷ್ಟು ನಗರಸಭೆಗಳನ್ನು ರಚಿಸುವ ಯೋಜನೆ ಸರ್ಕಾರದ ಮುಂದಿದೆ; ಯಾವುವು; (ಜಿಲ್ಲಾವಾರು ವಿವರ ನೀಡುವುದು)

(ಇ) ಕುಂದಾಪುರ ಪುರಸಭೆಗೆ ಹಂಗಳೂರು, ಕೋಟೇಶ್ವರ, ಬೀಜಾಡಿ, ಕೋಣಿ ಗ್ರಾಮಗಳು ಹೊಂದಿಕೊಂಡಿರುವುದರಿಂದ ಇವುಗಳನ್ನು ಒಟ್ಟು ಸೇರಿಸಿ ನಗರಸಭೆಯನ್ನಾಗಿ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ ಕಾರಣವೇನು?

## ಇಂಧನ ಉತ್ಪಾದನಾ ಘಟಕಗಳು ಮತ್ತು ಅವುಗಳ ಸಾಮರ್ಥ್ಯ

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧೨ (೧೭೭೧) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಲ್ಲಾ ವಿಧವಾದ ಇಂಧನ ಉತ್ಪಾದನೆ ಮಾಡುತ್ತಿರುವ ಘಟಕಗಳು ಮತ್ತು ಅವುಗಳ ಉತ್ಪಾದನಾ ಸಾಮರ್ಥ್ಯ ಎಷ್ಟು; (ಪೂರ್ಣ ವಿವರ ಒದಗಿಸುವುದು)

(ಆ) ಪ್ರಸ್ತುತ ರಾಜ್ಯಕ್ಕೆ ದಿನನಿತ್ಯ ಬೇಡಿಕೆ ಇರುವ ವಿದ್ಯುತ್‌ನ ಪ್ರಮಾಣ ಎಷ್ಟು; ದಿನನಿತ್ಯದ ವಿದ್ಯುತ್ ಉತ್ಪಾದನೆ ಪ್ರಮಾಣ ಎಷ್ಟು;

(ಇ) ಕಳೆದ ಹತ್ತು ವರ್ಷಗಳಿಂದ ವಿದ್ಯುತ್ ಬೇಡಿಕೆಯ ಅನುಗುಣವಾಗಿ ಅಂದಿನ ಆಯಾ ಸರ್ಕಾರಗಳು ವಿದ್ಯುತ್ ಉತ್ಪಾದನೆಗೆ ತೆಗೆದುಕೊಂಡ ಕ್ರಮಗಳೇನು; ಎಷ್ಟೆಷ್ಟು ಉತ್ಪಾದನೆ ಮಾಡಲಾಗಿದೆ; (ವರ್ಷವಾರು ವಿವರ ನೀಡುವುದು)?

## ರೈತರಿಗೆ ವಿವಿಧ ಶ್ರೇಣಿಯಲ್ಲಿ ಬಡ್ಡಿ ದರದಲ್ಲಿ ಸಾಲ

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೧೩ (೧೭೭೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಹಕಾರ ಇಲಾಖೆಯಿಂದ ರೈತರಿಗೆ ವಿವಿಧ ಶ್ರೇಣಿಯ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಲಾಗುತ್ತಿದೆಯೇ; ನೀಡುತ್ತಿದ್ದರೆ, ೨೦೧೩-೧೪ನೇ ಸಾಲಿನಲ್ಲಿ ಯಾವ ಯಾವ ಶ್ರೇಣಿಯಲ್ಲಿ ನೀಡಿರುವ ಒಟ್ಟು ಸಾಲದ ಮೊತ್ತ ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಆ ಸಾಲದ ವಿತರಣೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರ ಒಟ್ಟು ಫಲಾನುಭವಿಗಳ ಸಂಖ್ಯೆ ಮತ್ತು ಸಾಲದ ಒಟ್ಟು ಮೊತ್ತ ಎಷ್ಟು; (ವಿವರ ನೀಡುವುದು)

(ಇ) ಒಟ್ಟು ಸಾಲ ಪಡೆದ ಫಲಾನುಭವಿಗಳಲ್ಲಿ ಹೊಸ ಫಲಾನುಭವಿಗಳ ಸಂಖ್ಯೆ ಮತ್ತು ಅವರು ಪಡೆದ ಮೊತ್ತವೆಷ್ಟು;

(ಈ) ೨೦೧೩-೧೪ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ವಿತರಿಸಿದ ಸಾಲದ ಮೊತ್ತ ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)?

## ಅಲ್ಪಸಂಖ್ಯಾತರ ಯೋಜನೆಗಳು

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ)(ನಾಮನಿರ್ದೇಶನ ಹೊಂದಿದವರು) :-**

೧೪೧೪(೧೭೮೬) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುಮಕೂರು ಜಿಲ್ಲೆ ತುರುವೇಕೆರೆ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅಲ್ಪ ಸಂಖ್ಯಾತ ಜನಾಂಗಕ್ಕೆ ಸೇರಿದ ಜನರ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು)

(ಆ) ಈ ಜನಾಂಗಕ್ಕೆ ಸೇರಿದ ಪ್ರಾರ್ಥನಾ ಮಂದಿರಗಳೆಷ್ಟು; ಹಾಗೂ ಜನಾಂಗದ ಸಮುದಾಯ ಭವನಗಳೆಷ್ಟು;

(ಇ) ಅಲ್ಪಸಂಖ್ಯಾತ ಜನಾಂಗಕ್ಕೆ ಶವಾಗಾರ ಇಲ್ಲದಿರುವುದು ತಿಳಿದಿದೆಯೇ;

(ಈ) ಹಾಗಿದ್ದಲ್ಲಿ, ಈ ವರ್ಷ ಶವಾಗಾರ ಮಾಡಲು ಸರ್ಕಾರ ಅನುದಾನ ಬಿಡುಗಡೆ ಮಾಡುವುದೇ;

(ಉ) ಇಲ್ಲಿ ವಾಸಿಸುತ್ತಿರುವ ಜೈನ್ ಸಮುದಾಯದ ಬಗ್ಗೆ ಮಾಹಿತಿ ನೀಡುವುದು; ಈ ಜನಾಂಗಕ್ಕೆ ಇದುವರೆಗೆ ನೀಡಿರುವ ಅನುದಾನದ ಮೊತ್ತವೆಷ್ಟು?

## ಸೋಲಾರ್ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಸಹಕಾರ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ)(ನಾಮನಿರ್ದೇಶನ ಹೊಂದಿದವರು) :-**

೧೪೧೫(೧೭೮೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಗೆ ಇಲಾಖೆ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು;

(ಆ) ಹಾಗಿದ್ದಲ್ಲಿ, ಸಾರ್ವಜನಿಕ ವಲಯದಿಂದ ಅಪೇಕ್ಷೆ ಬಂದಲ್ಲಿ ಅವರಿಗೆ ಯಾವ ರೀತಿ ಸರ್ಕಾರದ ಸೌಲಭ್ಯಗಳು ಹಾಗೂ ಸಹಕಾರ ಸಿಗಲಿದೆ;

(ಇ) ರಾಜ್ಯದ ಯಾವ ಯಾವ ಭಾಗಗಳನ್ನು ಗುರುತಿಸಲಾಗಿದೆ;

(ಈ) ಸರ್ಕಾರದ ಗೋಮಾಳ ಅಥವಾ ಪಾಳುಭೂಮಿಗಳಲ್ಲಿ ವಿದ್ಯುತ್ ತಯಾರಿಸಲು ಯೋಜನೆ ರೂಪಿಸಲಾಗಿದೆಯೇ?

## "ಅಧಿಕ ವೋಲ್ಟೇಜ್ ವಿತರಣಾ ವ್ಯವಸ್ಥೆ" ಯಡಿ ಟ್ರಾನ್ಸ್‌ಫಾರ್ಮರ್‌ಗಳ ಪೂರೈಕೆ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ)(ನಾಮನಿರ್ದೇಶನ ಹೊಂದಿದವರು) :-**

೧೪೧೬(೧೭೮೫) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಯಾವ-ಯಾವ ಭಾಗಗಳಲ್ಲಿ "ಹೈ ವೋಲ್ಟೇಜ್ ವಿತರಣಾ ವ್ಯವಸ್ಥೆ" (H.V.D.S) ಜಾರಿಗೆ ಬಂದಿದೆ;

(ಆ) ತುಮಕೂರು ಜಿಲ್ಲೆಯ ಯಾವ ತಾಲ್ಲೂಕಿನಲ್ಲಿ ವ್ಯವಸ್ಥೆಯನ್ನು ಕೈಗೆತ್ತಿಕೊಳ್ಳಲಾಗಿದೆ ;

(ಇ) ತುರುವೇಕೆರೆ ತಾಲ್ಲೂಕಿಗೆ ಹೈವೋಲ್ಟೇಜ್ ವಿತರಣಾ ವ್ಯವಸ್ಥೆಯನ್ನು ಅಳವಡಿಸದಿರಲು ಕಾರಣವೇನು;

(ಈ) ಇಲ್ಲಿನ ರೈತರು ಸಂಕಷ್ಟದಲ್ಲಿದ್ದು, ಸರಿಯಾಗಿ ಟ್ರಾನ್ಸ್‌ಫಾರ್ಮರ್‌ಗಳು ಸಿಗದೇ ಬೆಳೆ ಹಾನಿಯಾಗುವುದರಿಂದ, ಈ ಯೋಜನೆಯನ್ನು ಕೂಡಲೇ ಜಾರಿ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಲಾಗುವುದೇ?

## ಇಂಧನ ಇಲಾಖಾ ಕಛೇರಿಗಳು ಹಾಗೂ ವಿದ್ಯುತ್ ವಿತರಣಾ ಉಪಸ್ಥಾವರಗಳು

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ)(ನಾಮನಿರ್ದೇಶನ ಹೊಂದಿದವರು) :-**

೧೪೧೭(೧೭೮೪) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುರುವೇಕೆರೆ ತಾಲ್ಲೂಕಿನಲ್ಲಿ ಇಂಧನ ಇಲಾಖೆಯ ಉಪವಿಭಾಗ ಕಛೇರಿ ಹಾಗೂ ಶಾಖಾ ಕಛೇರಿ ಮತ್ತು ವಿದ್ಯುತ್ ವಿತರಣಾ ಉಪಸ್ಥಾವರಗಳು ಇರುವುದೆಷ್ಟು;

(ಆ) ತಾಲ್ಲೂಕಿನ ವಿಸ್ತೀರ್ಣ ಹಾಗೂ ಜನರ ಬೇಡಿಕೆಗೆ ಅನುಗುಣವಾಗಿ ಹೊಸದಾಗಿ ಮಂಜೂರಾತಿಗೆ ಬಂದಿರುವ ಕೋರಿಕೆಗಳೆಷ್ಟು;

(ಇ) ಹಾಗಿದ್ದಲ್ಲಿ, ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು; (ಪೂರ್ಣ ಮಾಹಿತಿ ಕೊಡುವುದು)

(ಈ) ರೈತರು ಹಾಗೂ ಸಾರ್ವಜನಿಕರ ಅನುಕೂಲಕ್ಕೆ ಇವೆಲ್ಲಾ ಸರ್ಕಾರ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವುದೆ?

## ಪುರಸಭೆ ಅಭಿವೃದ್ಧಿ ವಿಶೇಷ ಅನುದಾನ ಬಿಡುಗಡೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ ) :-**

೧೪೧೮(೧೭೮೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಸ್ತರಣೆ ಪ್ರದೇಶದಲ್ಲಿ ಆರ್ಥಿಕ ಮುಗ್ಗಟ್ಟಿನಿಂದ ಅಭಿವೃದ್ಧಿ ವಂಚಿತವಾಗಿರುವ ಬೆಳಗಾವಿ ಜಿಲ್ಲೆ ಬೈಲಹೊಂಗಲ ಪುರಸಭೆಯನ್ನು ಅಭಿವೃದ್ಧಿಪಡಿಸಲು ಆರ್ಥಿಕ ಸಹಾಯ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ;

(ಆ) ಮಲಪ್ರಭಾ ಯೋಜನೆಯಲ್ಲಿ ಮುಳುಗಡೆ ಆದ ಜನರು ವಿಸ್ತರಣೆ ಪ್ರದೇಶದಲ್ಲಿ ವಲಸೆಯಾಗಿದ್ದು, ಆ ಜನರಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ಒಳಚರಂಡಿ, ಬೀದಿ ದೀಪ, ತೊಂದರೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಪುರಸಭೆಯು ನಗರಸಭೆಯಾಗುವ ಎಲ್ಲ ಅರ್ಹತೆಗಳನ್ನು ಹೊಂದಿದ್ದರೂ ಕೂಡಾ ಇನ್ನೂ ನಗರಸಭೆಯನ್ನಾಗಿ ಆದೇಶ ಹೊರಡಿಸದೇ ಇರುವ ಹಿನ್ನೆಲೆಯಲ್ಲಿ ಸರ್ಕಾರದಿಂದ ಕಡಿಮೆ ಅನುದಾನ ಸಿಗುತ್ತಿರುವುದರಿಂದ ಈ ಪುರಸಭೆ ಆರ್ಥಿಕ ತೊಂದರೆ ಅನುಭವಿಸುತ್ತಿದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ತತ್‌ಕ್ಷಣ ಯಾವುದಾದರೊಂದು ಯೋಜನೆಯಲ್ಲಿ ಐದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗುವುದೇ; ಹಾಗೂ ಕುಡಿಯುವ ನೀರಿನ ತೊಂದರೆ ತಪ್ಪಿಸಲು ಇಪ್ಪತ್ತೈದು ಕೊಳವೆ ಬಾವಿ ತೋಡಿಸಲು ಕ್ರಮ ಕೈಗೊಳ್ಳಲಾಗುವುದೇ;

(ಉ) ಬೈಲಹೊಂಗಲ ನಗರಕ್ಕೆ ಹೊಂದಿರುವ ಬೆಳಗಾವಿ ಲೋಕೋಪಯೋಗಿ ಇಲಾಖೆಗೆ ಸೇರಿದ ಮರಕುಂಬಿ ಹದ್ದಿನಲ್ಲಿ ಇರುವ ರಿ.ಸ.ನಂ. ೧೫೭, ೨-೧೭ ಎಕರೆ ಈ ಜಮೀನು ಲೋಕೋಪಯೋಗಿ ಇಲಾಖೆಗೆ ಉಪಯೋಗವಿಲ್ಲದ ಖರಾಬು ಜಮೀನು ಇದ್ದು ಅದನ್ನು ಅವರಿಂದ ವಶಪಡಿಸಿಕೊಂಡು ಇಲ್ಲಿ ಸಾರ್ವಜನಿಕ ಉದ್ಯಾನ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

## ಬೃಹತ್ ಪ್ರಮಾಣದ ಉಗ್ರಾಣಗಳ ನಿರ್ಮಾಣ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ ) :-**

೧೪೧೯(೧೭೮೭) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆಯಲ್ಲಿ ಕಾಳು-ಕಡ್ಡಿ ಸಂಗ್ರಹಿಸಲು ಉಗ್ರಾಣಗಳ ಕೊರತೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ವೇರ್‌ಹೌಸ್‌ಗಳನ್ನು ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಇ) ವೇರ್‌ಹೌಸ್ ನಿರ್ಮಿಸಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಯಾವ ಯಾವ ನೆರವು/ ಪ್ರೋತ್ಸಾಹ ದೊರೆಯುತ್ತಿದೆ; ಇದರ ಮಾಹಿತಿ ರೈತರಿಗೆ ಎಲ್ಲಿ ಸಿಗುವುದು; (ವಿವರ ನೀಡುವುದು)

(ಈ) ಒಂದು ವೇಳೆ ರೈತರು ಕಟ್ಟಿಸಿ ಕೊಟ್ಟಲ್ಲಿ ಸರ್ಕಾರ ಅವುಗಳನ್ನು ಬಾಡಿಗೆಯ ಮೇಲೆ ತೆಗೆದುಕೊಳ್ಳುವುದೇ; ಹಾಗೂ ಯಾವ ಷರತ್ತುಗಳು ಮತ್ತು ನಿಬಂಧನೆಗಳ (Terms and Conditions) ಮೇಲೆ ತೆಗೆದುಕೊಳ್ಳಲಾಗುವುದು;

(ಉ) ಬೈಲಹೊಂಗಲ, ಸೌದತ್ತಿ ಹಾಗೂ ರಾಮದುರ್ಗ ತಾಲ್ಲೂಕುಗಳಲ್ಲಿ ಸಹ ವೇರ್‌ಹೌಸ್ ಕೊರತೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರೈತರು ಅಲ್ಲಿ ಕಟ್ಟಿಸಿಕೊಟ್ಟಲ್ಲಿ ಸರ್ಕಾರವು ಯಾವ ನಿಬಂಧನೆ ಮತ್ತು ಷರತ್ತುಗಳ ಮೇಲೆ ತೆಗೆದುಕೊಳ್ಳುವುದು? (ವಿವರ ನೀಡುವುದು)

## ಕೃಷಿ ಮಾರುಕಟ್ಟೆಯಲ್ಲಿ ಆಡು ಹಾಗೂ ಕುರಿಗಳ ಮಾರಾಟ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ ) :-**

೧೪೨೦(೧೭೮೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಕೃಷಿ ಮಾರುಕಟ್ಟೆಯಲ್ಲಿ ಆಡು ಹಾಗೂ ಕುರಿಗಳನ್ನು ತೂಕ ಮಾಡಿ ಮಾರುವ ಪದ್ಧತಿಯನ್ನು ತರಲಾಗುತ್ತಿದೆಯೇ;

(ಆ) ಹಾಗಿದ್ದಲ್ಲಿ, ಬೆಳಗಾವಿ ಎ.ಪಿ.ಎಂ.ಸಿ ಯಲ್ಲಿ ಈ ಕ್ರಮವನ್ನು ಅನುಸರಿಸಲಾಗುವುದೇ;

(ಇ) ಇದರ ಸಾಧಕ–ಬಾಧಕಗಳೇನು;

(ಈ) ಈ ಪದ್ಧತಿ ಅನುಸರಿಸುವುದರಿಂದ ಗ್ರಾಹಕರಿಗೆ ಹೆಚ್ಚಿನ ಅನುಕೂಲವಾಗುವುದಿಲ್ಲವೇ; ಹಾಗಿದ್ದಲ್ಲಿ ರಾಜ್ಯದ ಎ.ಪಿ.ಎಂ.ಸಿ ಯಲ್ಲಿಯೂ ಸಹ ಈ ಪದ್ಧತಿ ಪ್ರಾರಂಭಿಸಲಾಗುವುದೇ?

## ಹೊಸ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ ) :–**

೧೪೨೧(೧೭೯೧) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; (ಹೆಸರು ವಿಳಾಸ ನೀಡುವುದು)

(ಆ) ಅವುಗಳಲ್ಲಿ ಎಷ್ಟು ಕಾರ್ಖಾನೆಗಳಿಗೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ; (ಅವುಗಳ ಹೆಸರು, ವಿಳಾಸ ನೀಡುವುದು)

(ಇ) ಹೊಸ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಸರ್ಕಾರದಿಂದ ಯಾವ ರೀತಿಯ ನೆರವನ್ನು ನೀಡಲಾಗುವುದು;

(ಈ) ಈಗಾಗಲೇ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಸರ್ಕಾರ ಎಷ್ಟು ಕಾರ್ಖಾನೆಗಳಿಗೆ ಪರವಾನಿಗೆ ನೀಡಿದೆ; ಯಾವ ಷರತ್ತುಗಳನ್ವಯ ಪರವಾನಿಗೆ ನೀಡಿದೆ; ಪರವಾನಿಗೆ ನೀಡಿದ ಕಾರ್ಖಾನೆಗಳ ಹೆಸರು ವಿಳಾಸ ನೀಡುವುದು;

(ಉ) ಪರವಾನಿಗೆ ನೀಡಿದರೂ ಇನ್ನೂವರೆಗೂ ಪ್ರಾರಂಭವಾಗದೇ ಇರುವ ಕಾರ್ಖಾನೆಗಳು ಯಾವುವು; ಪ್ರಾರಂಭಿಸಲು ಅವರಿಗೆ ಯಾವ ತೊಂದರೆ ಇರುವುದು; ಅವುಗಳನ್ನು ಹೋಗಲಾಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

## ವಕೀಲರುಗಳ ಸಂಘಗಳಿಗೂ ಯಶಸ್ವಿನಿ ಯೋಜನೆ ಅನ್ವಯಿಸುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ ) :-**

೧೪೨೨(೧೭೮೯) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತಾಲ್ಲೂಕು ಮಟ್ಟದಲ್ಲಿ ಇರುವ ಅಡ್ವೋಕೇಟ್ ಸಂಘಗಳನ್ನು ಯಶಸ್ವಿನಿ ಯೋಜನೆಯ ಅಡಿಯಲ್ಲಿ ಒಳಪಡಿಸಲಾಗಿರುವುದೇ;

(ಆ) ಒಂದು ವೇಳೆ ಒಳಪಡಿಸದೇ ಇದ್ದಲ್ಲಿ ಒಳಪಡಿಸಲು ಕ್ರಮ ಕೈಗೊಳ್ಳಲಾಗುವುದೇ;

(ಇ) ತಾಲ್ಲೂಕು ಮಟ್ಟದಲ್ಲಿ ಇರುವ ವಕೀಲಿ ಸಂಘದವರು ಸ್ಥಾಪಿಸಿದ ಸಹಕಾರಿ ಸಂಘ (ಕೋ-ಆಪರೇಟಿವ್ ಕಾಯ್ದೆ ಪ್ರಕಾರ ರಿಜಿಸ್ಟರ್ ಆದ ಸೊಸೈಟಿಗಳು) ಯಶಸ್ವಿನಿ ಯೋಜನೆ ಅಡಿಯಲ್ಲಿ ಬರುತ್ತವೆಯೇ;

(ಈ) ಒಂದು ವೇಳೆ ಈ ಯೋಜನೆಯಲ್ಲಿ ಬರದೇ ಇದ್ದಲ್ಲಿ ಅದನ್ನೂ ಸಹ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೇ?

## ರೈತರಿಗೆ ವಿತರಿಸುವ ರಸಗೊಬ್ಬರ

**ಶ್ರೀ ವಿ.ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೪೨೩ (೧೭೮೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರಸಕ್ತ ವರ್ಷದಲ್ಲಿ ರಾಜ್ಯದಲ್ಲಿ ರೈತರಿಗೆ ಸಮರ್ಪಕವಾಗಿ ರಸಗೊಬ್ಬರವನ್ನು ವಿತರಣೆ ಮಾಡಲಾಗಿದೆಯೇ; ಸರ್ಕಾರದಿಂದ ಪ್ರತಿ ರೈತರಿಗೆ ಎಕರೆಗೆ ಎಷ್ಟು (ಕೆ.ಜಿ) ಪ್ರಮಾಣದ ಗೊಬ್ಬರ ನೀಡಲಾಗುತ್ತಿದೆ; ಇದಕ್ಕೆ ರೈತರು ಹಣ ಪಾವತಿಸುವ ಅವಶ್ಯಕತೆ ಇದೆಯೇ;

(ಆ) ಹೀಗೆ ರೈತರಿಗೆ ನೀಡುವ ರಸಗೊಬ್ಬರವನ್ನು ರಾಜ್ಯದಲ್ಲಿಯೇ ಉತ್ಪಾದಿಸಲಾಗುತ್ತಿದೆಯೇ; ಅಥವಾ ಬೇರೆ ಕಡೆಯಿಂದ ತಯಾರಿಸಲಾಗುತ್ತಿದೆಯೇ; (ವಿವರ ನೀಡುವುದು)

(ಇ) ಪ್ರತಿ ವರ್ಷಕ್ಕೆ ರೈತರಿಗೆ ನೀಡುವ ಗೊಬ್ಬರದ ಪ್ರಮಾಣವೆಷ್ಟು; ಇದರಿಂದ ಸರ್ಕಾರಕ್ಕೆ ಆಗುವ ವೆಚ್ಚದ ವಿವರ ನೀಡುವುದು; ಪ್ರತಿ ಜಿಲ್ಲೆಗೆ ವಿತರಿಸುವ ಪ್ರಮಾಣ ಜಿಲ್ಲಾವಾರು ವಿವರ ನೀಡುವುದು;

(ಈ) ಆಹಾರೋತ್ಪನ್ನ ಕೃಷಿ ಮತ್ತು ವಾಣಿಜ್ಯೋದ್ಯಮ ಕೃಷಿ ಹೀಗೆ ಎರಡಕ್ಕೂ ಸರ್ಕಾರದಿಂದ ಗೊಬ್ಬರ ವಿತರಿಸಲಾಗುತ್ತಿದೆಯೇ? (ಜಿಲ್ಲಾವಾರು ವಿವರ ನೀಡುವುದು)

## ಕೆ.ಎಂ.ಎ.ಎಸ್.ಶ್ರೇಣಿ–II ಹುದ್ದೆಗಳಿಗೆ ಬಡ್ತಿ

**ಶ್ರೀ ಭಾನುಪ್ರಕಾಶ್ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೪೨೪ (೧೭೭೪) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಳೆದ ೫ ವರ್ಷಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಎಷ್ಟು ಸಂಖ್ಯೆ ವ್ಯವಸ್ಥಾಪಕರು, ಕಂದಾಯ ಅಧಿಕಾರಿಗಳು ಹಾಗೂ ಹಿರಿಯ ಆರೋಗ್ಯ ನಿರೀಕ್ಷಕರಿಗೆ ಕೆ.ಎಂ.ಎ.ಎಸ್. ಶ್ರೇಣಿ–II ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ; ಮುಂಬಡ್ತಿಗೆ ನಿಗಧಿಪಡಿಸಿರುವ ಶೇಕಡವಾರು ಪ್ರಮಾಣ ಎಷ್ಟು;

(ಆ) ಈ ಹುದ್ದೆಗಳಿಗೆ ಬಡ್ತಿಯಿಂದ ತುಂಬುವ ಹಾಗೂ ನೇರ ನೇಮಕಾತಿಗೆ ನಿಗಧಿಪಡಿಸಿರುವ ಸಂಖ್ಯೆ ಎಷ್ಟು; ಹಾಲಿ ಖಾಲಿ ಇರುವುದೆಷ್ಟು;

(ಇ) ಎಷ್ಟು ದಿನದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ; ಇದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿರುವ ಹುದ್ದೆಗಳೆಷ್ಟು? (ವಿವರಗಳೊಂದಿಗೆ)

## ಸಮುದಾಯ ಯೋಜನಾಧಿಕಾರಿಗಳನ್ನು ಮುಖ್ಯಾಧಿಕಾರಿಗಳಾಗಿ ನೇಮಕ

**ಶ್ರೀ ಭಾನುಪ್ರಕಾಶ್ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೪೨೫ (೧೭೭೩) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿನ ಎಷ್ಟು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮುದಾಯ ಯೋಜನಾಧಿಕಾರಿಗಳನ್ನು ಮುಖ್ಯಾಧಿಕಾರಿಗಳಾಗಿ/ಇನ್ನಿತರೇ ಅಧಿಕಾರಿಗಳಾಗಿ ನೇಮಿಸಲಾಗಿದೆ; (ವಿವರಗಳೊಂದಿಗೆ)

(ಆ) ಈ ರೀತಿ ಇವರುಗಳನ್ನು ನೇಮಿಸಿದಲ್ಲಿ, ಉದ್ದೇಶಿತ ಯೋಜನೆಯ ಕಾರ್ಯರೂಪಗಳಲ್ಲಿ ಪ್ರಗತಿ ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಸರ್ಕಾರದ ಮುಂದಿನ ನಿಲುವೇನು? (ವಿವರಗಳೊಂದಿಗೆ)

## ಗುಲ್ಬರ್ಗಾ ಜಿಲ್ಲೆಯ ರಸ್ತೆಗಳಿಗೆ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) :-**

೧೪೨೬ (೧೭೬೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೩ ವರ್ಷಗಳಲ್ಲಿ ಗುಲ್ಬರ್ಗಾ ಜಿಲ್ಲೆಯ ರಸ್ತೆಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;(ವಿವರ ಒದಗಿಸುವುದು)

(ಆ) ಹೀಗೆ ಬಿಡುಗಡೆ ಮಾಡಿರುವ ಅನುದಾನದಲ್ಲಿ ಕಾಮಗಾರಿ ಪೂರ್ಣಗೊಂಡಿರುವ ಮತ್ತು ಪೂರ್ಣಗೊಳ್ಳದೆ ಇರುವ ರಸ್ತೆಗಳು ಯಾವುವು? (ವಿವರ ಒದಗಿಸುವುದು)

## ಉರ್ದು ಶಾಲಾ ಮಕ್ಕಳ ಹಾಸ್ಟೆಲ್‌ಗಳು

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) :-**

೧೪೨೭ (೧೭೬೬) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು ಎಷ್ಟು ಉರ್ದು ಶಾಲಾ ಮಕ್ಕಳ ಹಾಸ್ಟೆಲ್‌ಗಳಿವೆ; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಕಳೆದ ೨ ವರ್ಷಗಳಲ್ಲಿ ಜಿಲ್ಲೆಯ ಉರ್ದು ಶಾಲಾ ಮಕ್ಕಳ ಹಾಸ್ಟೆಲ್‌ಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;

(ಇ) ಸದರಿ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ಯಾವ ಸೌಲಭ್ಯ ನೀಡಲಾಗುತ್ತಿದೆ; ಈ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರದ ಬಗ್ಗೆ ವಿವರ ಒದಗಿಸುವುದು;

(ಈ) ಈ ಹಾಸ್ಟೆಲ್‌ಗಳಿಗೆ ವಿಶೇಷವಾದ ಸೌಲಭ್ಯಗಳನ್ನು ಒದಗಿಸಲಾಗಿದೆಯೇ? (ವಿವರ ನೀಡುವುದು)

## ಹಂಚಿಕೆಯಾದ ನಿವೇಶನಗಳನ್ನು ಅಕ್ರಮವಾಗಿ ಕಬಳಿಸಿರುವವರ ವಿರುದ್ಧ ಕ್ರಮ

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೨೮ (೧೭೭೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆ, ಹಗರಿಬೊಮ್ಮನಹಳ್ಳಿಯ ಚಿಂತ್ರಪಳ್ಳಿ ಗ್ರಾಮ ಪಂಚಾಯತಿ ವಾರ್ಡ್ II ರ ವ್ಯಾಪ್ತಿಯಲ್ಲಿ ದಿನಾಂಕ: ೦೪-೦೨-೧೯೭೧ ರಲ್ಲಿ ತಹಶೀಲ್ದಾರರವರಿಂದ ಹಂಚಿಕೆಯಾದ ನಿವೇಶನಗಳ ವಿವರ (ನಿವೇಶನದಾರರ ಹೆಸರು, ನಿವೇಶನ ಸಂಖ್ಯೆ, ನಕ್ಷೆ ಸಮೇತ) ನೀಡುವುದು;

(ಆ) ಈ ರೀತಿ ಹಂಚಿಕೆಯಾದ ಖಾಲಿ ನಿವೇಶನಗಳ ಮೇಲೆ ನಿವೇಶನ ಕಬಳಿಕೆಯ ಉದ್ದೇಶಿತ ಕೆಲವು ವ್ಯಕ್ತಿಗಳು ಅಕ್ರಮವಾಗಿ ತಾತ್ಕಾಲಿಕ ಮನೆ ಕಟ್ಟಿ ನೈಜ ನಿವೇಶನದಾರರಿಗೆ ತೊಂದರೆ ಕೊಡುವಲ್ಲಿ ಚಿಂತ್ರಪಳ್ಳಿ ಗ್ರಾಮ ಪಂಚಾಯತಿಯ ಕೆಳಮಟ್ಟದ ಸಿಬ್ಬಂದಿಗಳು ಹಾಗೂ ನಿವೇಶನ ವ್ಯಾಪಾರದಲ್ಲಿರುವ ಏಜೆಂಟ್‌ಗಳು ಪ್ರೋತ್ಸಾಹ ನೀಡುತ್ತಿರುವುದು ನಿವೇಶನದಾರರಲ್ಲಿ ಆತಂಕ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸದರಿ ವಾರ್ಡ್ II ರಲ್ಲಿ ನಿವೇಶನ ಸಂಖ್ಯೆ ೧೧೨A ೧೧೨B ೧೧೩A ಹಾಗೂ ೧೧೩B ಯಾರಿಗೆ ಹಂಚಿಕೆಯಾಗಿವೆ, ಪ್ರಸ್ತುತ ನಿವೇಶನದಾರರು ಯಾರು ಹಾಗೂ ಈ ನಿವೇಶನಗಳನ್ನು ಅಕ್ರಮವಾಗಿ ವಶಪಡಿಸಿಕೊಂಡಿರುವವರು ಯಾರು (ವಿವರ ನೀಡುವುದು) ಅಕ್ರಮವಾಗಿ ನಿವೇಶನವನ್ನು ಬಲವಂತವಾಗಿ ವಶಪಡಿಸಿಕೊಂಡಿರುವವರನ್ನು ಖಾಲಿ ಮಾಡಿಸಲು ಸರ್ಕಾರ ಕ್ರಮ ಜರುಗಿಸುವುದೇ?

## ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೨೯ (೧೭೪೫) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಲಬರ್ಗಾ ವಿಭಾಗದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಅಡಿಯಲ್ಲಿ ಎಷ್ಟು ತರಕಾರಿ ಮಾರ್ಕೆಟ್ ನಿರ್ಮಾಣ ಮಾಡಲಾಗಿದೆ; (ವಿವರಗಳನ್ನು ನೀಡುವುದು)

(ಆ) ಸದರಿ ತರಕಾರಿ ಮಾರ್ಕೆಟ್‌ಗಳು ಉದ್ಘಾಟನೆಗೊಂಡಿವೆಯೇ; ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು;

(ಇ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಲ್ಲಿ ಸಬ್ಸಿಡಿ ಹಣವನ್ನು ಸರಕಾರ ವಿತರಿಸಿದೆಯೇ; ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು;

(ಈ) ರಾಯಚೂರು ಜಿಲ್ಲೆಯ ಸಿಂಧನೂರು ಮತ್ತು ಕೊಪ್ಪಳ ಜಿಲ್ಲೆಯ ಕೊಪ್ಪಳ ಪಟ್ಟಣದ ತರಕಾರಿ ಮಾರ್ಕೆಟ್ ಸ್ಥಿತಿ ಸದ್ಯ ಯಾವ ಹಂತದಲ್ಲಿದೆ;

(ಉ) ಮಾರ್ಕೆಟ್ ಮಳಿಗೆಗಳನ್ನು ವರ್ತಕರಿಗೆ ಯಾವ ಮಾನದಂಡಗಳ ಮೇಲೆ ನೀಡಲಾಗಿದೆ ? (ವಿವರಗಳನ್ನು ನೀಡುವುದು)

## ಸಮಗ್ರ ಜಲಾನಯನ ಅಭಿವೃದ್ಧಿ ಕಾರ್ಯಕ್ರಮ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೩೦ (೧೭೪೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಮಗ್ರ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸರ್ಕಾರ ೫೦೦ ಕೋಟಿ ರೂ.ಗಳನ್ನು ಒದಗಿಸಿದೆಯೇ;

(ಆ) ಹಣವನ್ನು ಒದಗಿಸಿದ್ದಲ್ಲಿ, ಈ ಯೋಜನೆಯಿಂದ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗೆ ಯಾವ ಯಾವ ಕಾರ್ಯಗಳಿಗೆ ಹಣವನ್ನು ಬಳಸಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಈ ಯೋಜನೆಯಿಂದ ರೈತರಿಗೆ ಆಗುವ ಪ್ರಯೋಜನಗಳೇನು, ವಿವರಣೆಯನ್ನು ಒದಗಿಸುವುದು;

(ಈ) ಈ ಯೋಜನೆಯ ಮುಖಾಂತರ ಕೈಗೊಂಡ ಕಾಮಗಾರಿಗಳ ಪ್ರಗತಿಯೇನು (ವಿವರ ನೀಡುವುದು) ?

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 03396/1000 ಪ್ರತಿಗಳು/18-07-2014